# ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 8 ಸಂಚಿಕೆ 33 ಆಗಸ್ಟ್ 17, 1986 ಬೆಲೆ 80 ಪೈಸೆ.


ಒಳಗೇನಿದೆ?....



## ರಾಷ್ಟ್ರೀಯ ಸಮಗ್ರತಾ ವಾರಾಚರಣೆ ಆಗಸ್ಟ್ 9-15

–ಪಿ. ರಾಮಚಂದ್ರರಾವ್

ಕರ್ನಾಟಕದಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕೇಂದ್ರ ಸಮಿತಿಯ ಕರೆಯ ಮೇರೆಗೆ ರಾಜ್ಯಾದ್ಯಂತವಾಗಿ ಪಕ್ಷದ ಘಟಕಗಳು ಸಾಮೂಹಿಕ ಸಂಘಟನೆಗಳ ಬೆಂಬಲದಿಂದ "ರಾಷ್ಟ್ರೀಯ ಸಮಗ್ರತಾ ವಾರಾಚರಣೆ"ಯ ಮೂಲಕ ದೇಶವು ಇಂದು ಎದುರಿಸುತ್ತಿರುವ ಛಿದ್ರಕಾರಿ ಶಕ್ತಿಗಳ ಧಾಳಿಯ ಕುರಿತು ಜನತೆಯನ್ನು ವಿಚಾರಿಸುವ ಹಾಗೂ ಜಾಗೃತಿಗೊಳಿಸುವ ಸಪ್ತಾಹ ಆಚರಣೆ ಮಾಡುತ್ತಿವೆ. ಲಕ್ಷಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಕರಪತ್ರಗಳನ್ನು, ಸಾವಿರಗಟ್ಟಲೆಯಲ್ಲಿ ಪೋಸ್ಟರುಗಳನ್ನು ಪ್ರಚಾರಕ್ಕೆ ಉಪಯೋಗಿಸಲಾಗುತ್ತಿದೆ. ನೂರಾರು ಸಭೆಗಳನ್ನು ನಡೆಸಲಾಗುತ್ತಿದೆ.

ರಾಷ್ಟ್ರೀಯ ಸಮಗ್ರತೆಯು ಇಂದು ಒಂದನೇ ರಾಷ್ಟ್ರೀಯ ಪ್ರಶ್ನೆಯಾಗಿದೆ. ನಾನಾ ರೂಪಗಳಲ್ಲಿ ಸಾಮ್ರಾಜ್ಯಶಾಹಿಗಳು ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳನ್ನು ಉಪಯೋಗಿಸಿ ದೇಶದಸಮಗ್ರತೆಯನ್ನು, ಐಕ್ಯತೆಯನ್ನು ಛಿದ್ರ ಮಾಡಲು ಹವಣಿಸುತ್ತಿರುವುದು ಎಲ್ಲೆಡೆಗಳಲ್ಲಿ ಕಾಣಬಹುದು. ಜಾತೀಯ ತಳಹದಿಯಲ್ಲಿ ದಳಗಳನ್ನು ಕಟ್ಟಿ ಕಾಂಗ್ರೆಸ್ (ಐ)ಆಡಳಿತೆಯ ಬಿಹಾರದಲ್ಲಿ ದಿನನಿತ್ಯ ಹರಿಜನರ ಮತ್ತಿತರ ಹಿಂದುಳಿದ ಜಾತಿಗಳ ಜನರನ್ನು ಬಲಿ ಕೊಡುತ್ತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಗಾಂಧಿಯ ಊರಾದ ಅಹಮದಾಬಾದಿನಲ್ಲಿ ತಿಂಗಳುಗಟ್ಟಲೇ ಹಿಂದೂ ಮುಸ್ಲಿಂ ಮತೀಯ ದಂಗೆಗಳು ನಡೆಯುತ್ತಿರುತ್ತವೆ. ದೇಶದ ದಕ್ಷಿಣದ ಮೂಲೆಯಾದ ನಾಗರ್‌ಕೊಯಿಲಿನಲ್ಲಿ ಹಿಂದೂಗಳಿಗೂ ಕ್ರಿಶ್ಚಿಯನ್ನರಿಗೂ 'ಒಂಟಿ ಬಂಡೆಕಲ್ಲಿ'ನ ವಿಷಯದಲ್ಲಿ ನಿತ್ಯಜಗಳವಾದದರೆ, ಉತ್ತರದ ತುದಿಯಲ್ಲಿ ಪಾಕಿಸ್ತಾನಿಗಳಿಂದ ಆಧುನಿಕ ತರಬೇತಿ ಪಡೆದ ಸಿಖ್‌ಖಾಲಿಸ್ತಾನಿಗಳು ನಿತ್ಯ 7-8 ಕೊಲೆಗಳನ್ನು ನಡೆಸುತ್ತಿದ್ದಾರೆ. ಈಶಾನ್ಯ ಭಾಗಗಳಲ್ಲಿ ಹಲವಾರು ರಾಜ್ಯಗಳಲ್ಲಿ ಬಾಂಗ್ಲಾ ದೇಶದಲ್ಲಿ ತರಬೇತಿಗೊಂಡ ಮತ್ತು ಶಿಬಿರಗಳನ್ನು ಸ್ಥಾಪಿಸಿಕೊಂಡಹಲವಾರು ಸಶಸ್ತ್ರದಳಗಳು ಸರಾಗವಾಗಿ ಭಾರತದ ನಾಗರಿಕರ ಮೇಲೆ ಧಾಳಿಗಳನ್ನು ಸಂಘಟಿಸುತ್ತಿವೆ. ಪ್ರತ್ಯೇಕತಾಭಾವನೆಯನ್ನು ಕೆರಳಿಸುತ್ತಿವೆ ಸ್ವತಂತ್ರ ರಾಜ್ಯಗಳನ್ನು ರಚಿಸಲು ಹವಣಿಸುತ್ತಿವೆ. ನೇಪಾಲ ಮತ್ತು ಭಾರತಗಳ ನಡುವೆ "ಯಾವುದೇ ನಾಗರಿಕ ಹಕ್ಕುಗಳಭೇದಗಳಿಲ್ಲದೆ" ನೇಪಾಳಿಯರಿಗೂ ಭಾರತೀರಿಗೂ ಸಮಾನ ಸ್ಥಾನಮಾನ ದಶಕಗಳಿಂದ ಇರುವಾಗ, ಇದೀಗ "ನೇಪಾಳಿಯರಿಗೆ ಪ್ರತ್ಯೇಕ ಗೂರ್ಖಾ ಲ್ಯಾಂಡ್" ಬೇಕು ಎಂಬ ಚಳುವಳಿ ಆರಂಭವಾಗಿ ಹಿಂಸಾ ರೂಪವನ್ನು ತಾಳುತ್ತಿದೆ.

ಈ ಸಂದರ್ಭದಲ್ಲಿ ಎಲ್ಲಾ ಪಕ್ಷಗಳು –ಆಳುವ ಕಾಂಗ್ರೆಸ್ (ಐ) ಪಕ್ಷ ಮತ್ತು ಬಂಡವಾಳಶಾಹಿ ಭೂಮಾಲಕ ವಿರೋಧ ಪಕ್ಷಗಳು–ತಮ್ಮ ಪಕ್ಷದ ಸ್ವಾರ್ಥ ಸಾಧನೆಗೆ ಈ ಛಿದ್ರಕಾರಿ

(8ನೇ ಪುಟ ನೋಡಿ)

### ಸಂವಿಧಾನದ 249 ನೇ ಕಲಂ

ಸಂವಿಧಾನದ 249 ಕಲಂ ಅನ್ವಯ ಪಾರ್ಲಿಮೆಂಟಿಗೆ ರಾಷ್ಟ್ರದ ವಾಯುವ್ಯ ಸರಹದ್ದಿನ ಕೆಲವು ಭಾಗಗಳನ್ನು ಕೇಂದ್ರ ಸರಕಾರದ ನೇರ ಆಡಳಿತೆಯಡಿ ತರುವ ಠರಾವನ್ನು ಆಗಸ್ಟ್ 13ರಂದು ರಾಜ್ಯ ಸಭೆಯು ಅಂಗೀಕಾರ ಮಾಡಿತು. ಇದನ್ನು ಸಿ.ಪಿ.ಐ(ಎಂ) ಸಿ.ಪಿ.ಐ, ಜನತಾ ಮತ್ತು ತೆಲುಗು ದೇಶಂ ಪಕ್ಷಗಳು ವಿರೋಧಿಸಿ ಮತ ಹಾಕಿವೆ. ಈ ಅಧಿಕಾರವನ್ನು ದೇಶದ ಯಾವುದೇ ಭಾಗದಲ್ಲಿ ಉಪಯೋಗಿಸುವ ಅಪಾಯವಿದೆ ಎಂದೇ ಈ ಪಕ್ಷಗಳು ಈ ಠರಾವನ್ನು ವಿರೋಧಿಸಿವೆ.

ಇಲ್ಲಿ ಪ್ರಶ್ನೆ ; ತೀವ್ರವಾದಿಗಳಿಂದ ಗಡಿಗಳನ್ನು ರಕ್ಷಿಸಬೇಕೋ ಬೇಡವೋ ಎಂದಲ್ಲ. ಬದಲು, ದೇಶದ ಗಡಿಗಳನ್ನು ರಕ್ಷಿಸುವ ನೆಪದಲ್ಲಿ ಕೇಂದ್ರ ಸರಕಾರಕ್ಕೆ ದೇಶ ಯಾವುದೇ ರಾಜ್ಯದಲ್ಲಿ 'ಕೆಲವು ಭಾಗಗಳನ್ನು ತಮ್ಮ ನೇರ ಅಧಿಕಾರ ವಲಯದೊಳಗೆ ತರಲು' ಅಧಿಕಾರ ಕೊಟ್ಟರೆ, ಅದು ರಾಜ್ಯ ಸರಕಾರಗಳ ಕುರಿತು ತಮ್ಮ ಅಭಿಪ್ರಾಯ ಕೊಡುವುದಿಲ್ಲವೋ ಎಂಬುದಾಗಿದೆ.

ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಒಂದೇ ನಾಣ್ಯದ ಎರಡು ಮುಖಗಳು. ಒಂದೇ ಸಂವಿಧಾನದ ಘಟಕಗಳು. ಪರಸ್ಪರ ಹೊಂದಿಕೊಂಡು ಅದರಲ್ಲೂ ಕಾನೂನು ಮತ್ತು ವ್ಯವಸ್ಥೆ, ಗಡಿರಕ್ಷಣೆ ಇತ್ಯಾದಿ ವಿಷಯಗಳಲ್ಲಿ ಈ ಎರಡೂ ಸರಕಾರಗಳೂ ಯಾವಾಗಲೂ ವರ್ತಿಸುತ್ತಾ ಹೋಗಬೇಕಾಗಿದೆ. ಒಂದು ಇನ್ನೊಂದನ್ನು ಬಿಟ್ಟು ಕೆಲಸ ಮಾಡಲು ಸಾಧ್ಯವಿಲ್ಲ, ಸಾಧುವೂ ಅಲ್ಲ. ಪರಿಸ್ಥಿತಿ ಹೀಗಿರುವಾಗ, ರಾಜ್ಯಗಳಲ್ಲಿರುವ ರಾಜ್ಯ ಸರಕಾರಗಳನ್ನು ಕೇಳದೆ, ಅವುಗಳನ್ನು ಮೀರಿ, ಅವುಗಳ "ಆಡಳಿತೆಯ ಭಾಗಗಳನ್ನು" ಕೇಂದ್ರ ಸರಕಾರವು ತನ್ನ ನೇರ ಆಡಳಿತೆಯಡಿ ತರುವುದೆಂದರೆ ಆ ರಾಜ್ಯ ಸರಕಾರಗಳು "ಅಸಮರ್ಥ" ವೆಂದರ್ಥ ವಾಗುವುದಿಲ್ಲವೇ? ಕೇಂದ್ರ ಸರಕಾರ ಮಾತ್ರ ಇಂತಹ ವಿಷಯದಲ್ಲಿ ಸಮರ್ಥವೆಂದಾಗುವುದಿಲ್ಲವೇ ? ಅಲ್ಲದೇ ಈ ರಾಜ್ಯಗಳಲ್ಲಿರುವ ಸರಕಾರಗಳು ಮತ್ತು ಕೇಂದ್ರ ಸರ್ಕಾರವು ರಾಷ್ಟ್ರದ ಬೇರೆ ಬೇರೆ ಪಕ್ಷಗಳ ನೇತೃತ್ವದಲ್ಲಿರುವಾಗ, ಕೇಂದ್ರ ಸರರ್ಕಾರವು ಅಧಿಕಾರಗಳನ್ನು (249 ಕಲಂ ನನ್ವಯ ಪಡೆದ ಅಧಿಕಾರಗಳನ್ನು) ರಾಜಕೀಯವಾಗಿ ದುರುಪಯೋಗ ಗೊಳಿಸುವುದಿಲ್ಲವೇ ?

ಈ ಪ್ರಶ್ನೆಗಳಿಗೆ ಕೇಂದ್ರದ ಗೃಹಮಂತ್ರಿ ಭೂಟಾಸಿಂಗ್‌ರು ಸಮರ್ಥಕವಾದ ಜವಾಬು ಕೊಡಲಿಲ್ಲ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಂಸತ್ ಸದಸ್ಯ ದಿಪಿನ್ ಘೋಷರು ಕೇಳಿದ ನೇರ ಪ್ರಶ್ನೆ : ನೀವು ಈ ಈ ಅಧಿಕಾರಗಳನ್ನು ದೇಶದ ಇತರ ಭಾಗಗಳಲ್ಲಿ ಉಪಯೋಗಿಸುವುದಿಲ್ಲವೇ ? ಭೂಟಾಸಿಂಗ್‌ರು ಈ ಪ್ರಶ್ನೆಗೆ "ಇಲ್ಲ" ಎಂಬ ಜವಾಬು ಕೊಡಲಿಲ್ಲ.

ಆದ ಕಾರಣ ಸಿ.ಐ.ಪಿ. (ಎಂ) ಪಕ್ಷವು ಈ ಠರಾವನ್ನು ವಿರೋಧಿಸಿತು.

ಕಾಂಗ್ರೆಸ್ (ಐ) ಪಕ್ಷದ ಸರ್ವಾಧಿಕಾರಿ ಮನೋಭಾವದ ಕುರಿತು ಎರಡು ಮಾತುಗಳಿಲ್ಲದಿರುವಾಗ, ವಿರೋಧ ಪಕ್ಷಗಳು ಮಾತ್ರವಲ್ಲ, ಕಾಂಗ್ರೆಸ್ಸಿನಲ್ಲೇ ದಶಕಗಳ ಕಾಲ ದುಡಿದ ಕಾಂಗ್ರೆಸ್ ಮುಖಂಡರೇ ಈ ಸರ್ವಾಧಿಕಾರಿ ಪ್ರವೃತ್ತಿಯ ಕುರಿತು ಖಂಡಿಸುತ್ತಿರುವಾಗ, ಈ ವ್ಯವಸ್ಥೆಗೆ ಅನುಕೂಲಮಾಡಿಕೊಡುವ ಯಾವುದೇ ಠರಾವಿಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ವಿರೋಧಿಸಿದೆ

## ದೇಶದ ಐಕ್ಯತೆ, ಸಮಗ್ರತೆ ರಕ್ಷಿಸಲು ಕಾರ್ಮಿಕರ ಪಣ

"ಕಾರ್ಮಿಕರ ನಡುವೆ ವಿಧ್ವಂಸಕ ಶಕ್ತಿಗಳು ಬೆಳೆಯದಂತೆ ಎಚ್ಚರ ವಹಿಸುವ ನಾವು ರಾಷ್ಟ್ರದ ಈ ಐಕ್ಯತೆ, ಸಮಗ್ರತೆ, ಸಾರ್ವಭೌಮತ್ವವನ್ನು ರಕ್ಷಿಸಲು ಪಣತೊಡುತ್ತೇವೆ. ನಮ್ಮ ಅನೈಕ್ಯತೆಯಿಂದ ಲಾಭ ಪಡೆಯುವ ಏಕಸ್ವಾಮ್ಯಗಳ, ಅವರ ರಾಷ್ಟ್ರವಿಘಾತುಕ ಏಜಂಟರುಗಳ ಹಾಗೂ ವಿದೇಶಿ ಶಕ್ತಿಗಳ ಕುಟಿಲ ನೀತಿಯನ್ನು ಬಯಲಿಗೆಳೆಯಲು ಶ್ರಮಿಸುತ್ತೇವೆ"-ಈಭಾವನೆ ಹೊಮ್ಮಿ ಬಂದದ್ದು ಆಗಸ್ಟ್ 9 ರಂದು ಬೆಂಗಳೂರಿನ ಪುರಭವನದಲ್ಲಿ ನಡೆದ ಬೆಂಗಳೂರಿನ ಕಾರ್ಮಿಕರ ಪ್ರತಿನಿಧಿಗಳ ಸಮಾವೇಶದಲ್ಲಿ. ಇದೇ ಮೇ11 ರಂದು ನವದೆಹಲಿಯಲ್ಲಿ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಆಶ್ರಯದಲ್ಲಿ ರಾಷ್ಟ್ರೀಯ ಐಕ್ಯತೆಗಾಗಿ ಮತ್ತು ಜಾತೀಯತೆ, ಛಿದ್ರಕಾರೀ ಶಕ್ತಿಗಳವಿರುದ್ಧ ನಡೆದ ಸಮಾವೇಶ ಆಗಸ್ಟ್ 9ನ್ನು ಸೌಹಾರ್ದತಾ ದಿನವನ್ನಾಗಿ ಆಚರಿಸಲು ಕರೆ ನೀಡಿತು. ಆ ಮೇರೆಗೆ ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಬಿ.ಎಮ್.ಎಸ್, ಹೆಚ್.ಎಂ.ಎಸ್., ಐ.ಎನ್.ಟಿ.ಯು.ಸಿ. ಈ ಐದು ಕೇಂದ್ರ ಕಾರ್ಮಿಕರ ಸಂಘಟನೆಗಳ ರಾಜ್ಯ ಘಟಕಗಳು ಮತ್ತು ಬ್ಯಾಂಕುಗಳು, ವಿಮಾಕ್ಷೇತ್ರ, ಹೆಚ್ ಎ ಎಲ್, ಕೇಂದ್ರ ಹಾಗೂ ರಾಜ್ಯ ಸರಕಾರೀ ನೌಕರರ ಸಂಘಟನೆಗಳು ಈ ಸಮಾವೇಶವನ್ನು ಏರ್ಪಡಿಸಿದ್ದವು.

"ತಮ್ಮ ಎಂದಿನ ಸೀಮಿತ ಆರ್ಥಿಕ ಬೇಡಿಕೆಗಳನ್ನು ಬದಿಗಿಟ್ಟು, ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ದೇಶದ ಗಂಭೀರ ಸಮಸ್ಯೆಯೊಂದರ ಬಗ್ಗೆ ನಡೆದ ಈ ಸಮಾವೇಶ ಅರ್ಥಪೂರ್ಣವಾದ ಕಾರ್ಯಕ್ರಮ" ಎಂದು ಸಿ.ಐ ಟಿ.ಯು. ಪರವಾಗಿ ಮಾತನಾಡಿದ ಕಾ. ಅನಂತರಾಂ ಹೇಳಿದರೆ, ಇತರ

(8ನೇ ಪುಟ ನೋಡಿ)

ಕೇರಳ :

# ಠುಸ್ಸೆಂದ "ಬಂಡಾಯ"

ಕೇರಳದ ಆಳುವ ಯು.ಡಿ.ಎಫ್.ನ ಸಮಯಸಾಧಕ ಹಾಗೂ ದಮನಕಾರೀ ಧೋರಣೆಗಳ ವಿರುದ್ಧ ಎಡ ಪ್ರಜಾಪ್ರಭುತ್ವ ರಂಗ "ಅನೈಕ್ಯತೆಯಿಂದ ಕೂಡಿದ ರಂಗ" ಎಂದು ಜನರನ್ನು ನಂಬಿಸಲು ಕಾಂಗ್ರೆಸ್ ಮುಖಂಡರು, ಅವರ ಚುನಾವಣಾ ಮಿತ್ರರು ಹಾಗೂ ಅವರನ್ನು ಬೆಂಬಲಿಸುವ ಗುತ್ತೇದಾರಿ ಪತ್ರಿಕೆಗಳು ಶತಪ್ರಯತ್ನ ನಡೆಸಿದರು. "ಸಿ.ಪಿ.ಐ. (ಎಂ) ಒಡೆದಿದೆ." "ಬಹಳಷ್ಟು ಸದಸ್ಯರು, ಹಿತೈಷಿಗಳು ರಾಘವನ್‌ರ ಹಿಂದೆ ಹೋಗಿದ್ದಾರೆ" ಇತ್ಯಾದಿ ಪ್ರಚಾರ ಮಾಡಲು ಸರ್ವಪ್ರಯತ್ನ ನಡೆಸಿದರು; ಜುಲೈ 27 ರಂದು ರಾಘವನ್ ತನ್ನ ಹೊಸ "ಸಾಚಾ ಸಿ.ಪಿ.ಐ. (ಎಂ)" ಸ್ಥಾಪಿಸಬೇಕೆಂದಿದ್ದ ಸಮಾವೇಶವನ್ನು ರಾಜ್ಯದ ಒಂದು ಪ್ರಮುಖ ರಾಜಕೀಯ ಘಟನೆ ಎಂದು ಭವಿಷ್ಯ ನುಡಿದರು, ಆದರೆ ಸಮಾವೇಶ ನಿಜವಾಗಿ ನಡೆದಾಗ ಅದರಲ್ಲಿ ಬೆರಳೆಣಿಕೆಯಷ್ಟು ಕೂಡಾ ಸಿ.ಪಿ.ಐ. (ಎಂ) ಮುಖಂಡರು ಕಾಣಬರಲಿಲ್ಲ. ಹತ್ತು-ಹನ್ನೆರಡು ಎಂ.ಎಲ್.ಎಗಳು ಭಾಗವಹಿಸುತ್ತಾರೆಂದು ಭವಿಷ್ಯ ನುಡಿದಿದ್ದ ಪತ್ರಿಕೆಗಳು ಕೂಡ "ರಾಘವನ್ನರನ್ನು ಈ ಹಿಂದೆಯೇ ಬೆಂಬಲಿಸಿದ ಇಬ್ಬರು ಎಂ.ಎಲ್.ಎ.ಗಳನ್ನು ಬಿಟ್ಟರೆ ಬೇರೆ ಯಾವ ಎಂ.ಎಲ್.ಎ. ಕೂಡಾ ಅತ್ತ ತಲೆ ಹಾಕಲಿಲ್ಲ" ಎಂದು ಹೇಳಬೇಕಾಗಿ ಬಂತು.

ಇಷ್ಟೇ ಅಲ್ಲ, ಪಕ್ಷದ ನಿಲುವಿಗೆ ಸವಾಲು ಹಾಕಿದ ದಸ್ತಾವೇಜಿಗೆ ಸಹಿಹಾಕಿದ 9 ಜನರಲ್ಲಿ ಕೇವಲ ಒಬ್ಬರಷ್ಟೇ ಈಗ ರಾಘವನ್ ಜೊತೆಗಿದ್ದಾರೆ. ಪಕ್ಷದ ವಿವಿಧ ಘಟಕಗಳಿಂದ ಬಂದ ವರದಿಗಳ ಪ್ರಕಾರ 1,30.000 ಸದಸ್ಯರಲ್ಲಿ 200ಕ್ಕೂ ಕಮ್ಮಿ ಸದಸ್ಯರು ರಾಘವನ್ ಗುಂಪು ಸೇರಿದ್ದಾರಷ್ಟೆ. ಢಾಣಾ-ಡಂಗುರದೊಂದಿಗೆ ಸಾರಲ್ಪಟ್ಟ "ರಾಘವನ್ ಬಂಡಾಯ" ಕೇವಲ ಠುಸ್ಸೆಂದ ಪಟಾಕಿಯಾಯಿತು. ಕೇರಳದಲ್ಲಿ ಪಕ್ಷ ಭಾರೀ ಪ್ರಮಾಣದಲ್ಲಿ ಪಕ್ಷದ ಮಹಾಧಿವೇಶನದ, ರಾಜ್ಯ ಸಮಿತಿಯ ನಿರ್ಣಯಗಳನ್ನು ಈ ರೀತಿ ಬೆಂಬಲಿಸಿದಂತಾಗಿದೆ.

## "ಆಶ್ಚರ್ಯ ಪಡುವಂತಹ ದೇನೂ ಇಲ್ಲ"

"ಇದರಲ್ಲಿ ಆಶ್ಚರ್ಯಪಡುವಂತಹದೇನೂ ಇಲ್ಲ'' ಎನ್ನುತ್ತಾರೆ. ಇ.ಎಂ.ಎಸ್. ಯಾಕೆಂದರೆ ಪಕ್ಷ ಹಾಗೂ ಎಡ ಪ್ರಜಾಪ್ರಭುತ್ವರಂಗ ಕಾಂಗ್ರೆಸ್ಸಿನ ಬೆನ್ನು ಹಿಡಿದಿರುವ ಮುಸ್ಲಿಂ ಹಾಗೂ ಕ್ರಿಶ್ಚಿಯನ್ ಮೂಲಭೂತವಾದಿಗಳ ವಿರುದ್ಧ ಹಾಗೂ ಹಿಂದೂ ಮುನ್ನಾಣಿಯೆಂದು ಸಂಘಟಿತರಾಗಿರುವ ಹಿಂದೂ ಮೂಲಭೂತವಾದಿಗಳ ವಿರುದ್ಧ ಹೋರಾಡದೆ ಒಂದಂಗುಲ ಕೂಡಾ ಮುನ್ನಡೆ ಸಾಧಿಸುವುದು ಅಶಕ್ಯ ಎಂಬುದು ಪಕ್ಷದ ಸದಸ್ಯರು ಹಾಗೂ ಹಿತೈಷಿಗಳು ಕೂಡಾ ಸ್ವಂತ ಅನುಭವದಿಂದ ಈ ಪಾಠ ಕಲಿತಿದ್ದಾರೆ.

ಕೇರಳದ ವಿಧಾನ ಸಭಾ ಅಧಿವೇಶನ ಕೂಡಾ ಆಳುವ ರಂಗದ ಘಟಕಗಳ ಹಾಗೂ ಅವುಗಳ ತುತ್ತೂರಿ ಊದುವ ಪತ್ರಿಕೆಗಳ ಇನ್ನೊಂದು "ಭವಿಷ್ಯವಾಣಿ''ಯನ್ನು ಹುಸಿಗೊಳಿಸಿವೆ. ಸಿ.ಪಿ.ಐ.(ಎಂ)ನ ''ಏಕಮಾತ್ರ ಹೋರಾಟಗಾರ'' (ರಾಘವನ್) ಪಕ್ಷದಿಂದ ಉಚ್ಚಾಟಿಸಲ್ಪಟ್ಟಿರುವುದರಿಂದ ಎಲ್.ಡಿ. ಎಫ್., ಮುಖ್ಯತಃ ಸಿ.ಪಿ.ಐ.(ಎಂ) ಸಂಪೂರ್ಣ ನಿಷ್ಕ್ರಿಯವಾಗಿರುತ್ತದೆ. ಎಂದು ನಿರೀಕ್ಷಿಸಿದ ಆ ಪತ್ರಿಕೆಗಳೇ ಅಧಿವೇಶನದಲ್ಲಿ ಸಿ.ಪಿ.ಐ.(ಎಂ) ಮತ್ತು ಇತರ ಎಫ್.ಡಿ.ಎಫ್. ಸದಸ್ಯರು ಜನತೆಯ ಪರವಾಗಿ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸುವುದರ ವರದಿಗಳನ್ನು ಪ್ರಕಟಿಸಬೇಕಾಯಿತು. *

ಗುಜರಾತ್ :

# ಈ ಕೋಮು ಗಲಭೆಗಳಿಗೆ ಎಂದು ಕೊನೆ?

(ಜುಲೈ 16ರಂದು ಗಲಭೆ ಪೀಡಿತ ಅಹಮದಾಬಾದ್‌ಗೆ ಸಿ.ಪಿ.ಐ (ಎಂ) ಎಂ.ಪಿ.ಗಳ ಭೇಟಿ ಹಾಗೂ ಅಧ್ಯಯನ)

ಜುಲೈ 9ರಿಂದ ಕೆಲವು ದಿನಗಳ ಕಾಲ ಅಹಮದಾಬಾದ್ ನಗರ ಮತ್ತು ನಂತರ ಗುಜರಾತ್ ರಾಜ್ಯದ ಇತರ ಹಲವು ಸ್ಥಳಗಳು ಮತ್ತೊಮ್ಮೆ ಕೋಮುವಾದೀ ಹಿಂಸೆ ತಾಂಡವವಾಡಿದ ತಾಣಗಳಾದವು. 1969ರಲ್ಲಿ ಕೋಮು ಗಲಭೆಗಳಾದ ನಂತರ ಸುಮಾರಾಗಿ ಪ್ರತಿ ವರ್ಷವೂ ಅಹಮದಾಬಾದ್ ನಗರ ಕೋಮು ಘರ್ಷಣೆಗಳನ್ನು ಕಂಡಿದೆ. 1970ರಿಂದ 1980ರ ನಡುವೆ ಪ್ರತಿವರ್ಷ 20ರಿಂದ 40 ಗಲಭೆಗಳಾಗುತ್ತಿದ್ದವು. 1980ರಿಂದೀಚೆಗೆ ಈ ಸಂಖ್ಯೆ 70-90ಕ್ಕೇರಿದೆ. ಕಳೆದ ವರ್ಷವೂ ಇದೇ ಜಗನ್ನಾಥ ರಥ ಯಾತ್ರೆಯ ಸಂದರ್ಭದಲ್ಲಿ ಗಲಭೆಗಳು ನಡೆದು ಕನಿಷ್ಟ 19 ಜೀವಗಳನ್ನು ಕೋಮುವಾದೀ ರಾಕ್ಷಸರು ಬಲಿ ತೆಗೆದುಕೊಂಡಿದ್ದರು.

ಈ ವರ್ಷ ಮತ್ತೆ ಅದೇ ಕಥೆ. ಹಿಂದಿನ ವರ್ಷಗಳ ಅನುಭವದ ಆಧಾರದ ಮೇಲೆ ಧಾರ್ಮಿಕ ಮೆರವಣಿಗೆಗಳನ್ನು ಪ್ರತಿಬಂಧಿಸಿ ನಂತರ ನಡೆದ ಅಮಾನುಷ ಹಿಂಸಾಚಾರವನ್ನು ತಪ್ಪಿಸಬಹುದಾಗಿತ್ತು. ನಿಜವಾಗಿ ಕಳೆದ ವರ್ಷದ ರಥಯಾತ್ರೆಯ ಸಂದರ್ಭದ ಗಲಭೆಗಳ ನಂತರ ಈ ರೀತಿ ಪ್ರತಿಬಂಧ ಹಾಕಲಾಗಿತ್ತು. ಆದರೆ ಈ ಬಾರಿ ರಾಜ್ಯದ ಜಾತಿ ಶಕ್ತಿಗಳ ಸದ್ಯದ ಸಮತೋಲನದಲ್ಲಿ ಈ ಕ್ರಮ ಕೈಗೊಳ್ಳುವ ರಾಜಕೀಯ ಧೈರ್ಯ ಗುಜರಾತ್‌ನ ಕಾಂಗ್ರೆಸ್ (ಐ) ಸರಕಾರಕ್ಕಿರಲಿಲ್ಲ.

ಸಿ.ಪಿ.ಐ.(ಎಂ) ಎಂ.ಪಿ.ಗಳು ಗಲಭೆಗಳಿಂದ ಪೀಡಿತರಾದವರಿಗೆಂದು ತೆರೆದ ಆರು ಶಿಬಿರಗಳಲ್ಲಿ ಎರಡಕ್ಕೆ ಭೇಟಿ ನೀಡಿ ಕಂಡು, ಕೇಳಿದ ಸಂಗತಿಗಳು ಅತ್ಯಂತ ಖೇದವುಂಟು ಮಾಡುವಂತಹವು, ಒಂದರಲ್ಲಿ 5000 ಮುಸ್ಲಿಂ ಗಂಡಸರು, ಹೆಂಗಸರು, ಮಕ್ಕಳನ್ನು ಹಾಗು ಇನ್ನೊಂದರಲ್ಲಿ 2500 ಮಂದಿಯನ್ನು ಹೇಗೇಗೋ ತೂಡಿಹಾಕಿದ್ದ ಈ ಶಿಬಿರದ ಸ್ಥಿತಿ ಚಿಂತಾಜನಕವಾಗಿತ್ತು. ಸುಮಾರಾಗಿ ಈ ಎಲ್ಲರ ಮುಖ್ಯ ದೂರೆಂದರೆ ಪೋಲೀಸರ ಎದುರೇ ಮನೆಗಳನ್ನು, ಅಂಗಡಿಗಳನ್ನು ಸುಟ್ಟು ಹಾಕಲಾಕಲಾಗಿತ್ತು, ಅವರ ಮನೆಮಂದಿಯನ್ನು ಹಿಂಸಿಸಿ ಕೊಲ್ಲಲಾಯಿತು. ಕೆಲವೆಡೆ ಮುಸ್ಲಿಂ ಬಾಂಧವರ ದೂರುಗಳನ್ನು ದಾಖಲಿಸಿಕೊಳ್ಳಲು ಕೂಡಾ ಪೋಲೀಸರು ನಿರಾಕರಿಸಿದರಂತೆ. ಮುಸ್ಲಿಮರಲ್ಲಿ ತಮ್ಮ ವಿರುದ್ಧ ಭೇದ ಭಾವ ನಡೆಸಲಾಗುತ್ತಿದೆ ಎಂಬ ಹಾಗೂ ಸರಕಾರ ತಮ್ಮನ್ನು ರಕ್ಷಿಸಲಾರದು ಎಂಬ ಅಪನಂಬಿಕೆ ಸರ್ವೇ ಸಾಮಾನ್ಯವಾಗಿ ಈ ಶಿಬಿರಗಳಲ್ಲಿ ಕಾಣುತ್ತಿತ್ತು.

ಸಿ.ಪಿ.ಐ. (ಎಂ)ನ ಗುಜರಾತ್ ರಾಜ್ಯಸಮಿತಿ ಜನತೆಯ ನಡುವೆ ಮತ್ತೆ ಸದ್ಭಾವನೆ ತುಂಬಲು ಸರ್ವ ಪ್ರಯತ್ನ ಪಡುತ್ತಿದೆ. ಕೆಲವು ಮುಸ್ಲಿಂ ಸಂಗಾತಿಗಳು ಮುಸ್ಲಿಂ ಪ್ರದೇಶಗಳಲ್ಲಿ ಹಗಲು-ರಾತ್ರಿ ಜನರ ನೊಂದ ಮನಸ್ಸನ್ನು ಶಮನಗೊಳಿಸಲು ದುಡಿಯುತ್ತಿದ್ದಾರೆ ಎಂದು ಕಾಂ. ಸುಕೋಮಲ್ ಸೆನ್ ತಿಳಿಸಿದ್ದಾರೆ,

## ಈ ಗಲಭೆಗಳ ಹಿಂದೆ ಇರುವುದೇನು ?

ಗುಜರಾತ್‌ನ ಈ ಘಟನೆಗಳ ಹಿಂದೆ ಇರುವುದೇನು ಎಂಬುದನ್ನು ವಿಶ್ಲೇಷಿಸುತ್ತಾ ಕಾಂ. ಸುಕೋಮಲ್ ಸೆನ್ ಗುರುತಿಸಿದ ಮುಖ್ಯ ಅಂಶಗಳು ಹೀಗಿವೆ-

1) ಜವಳಿ ಉದ್ಯಮದ ಅತ್ಯಂತ ಹಳೆಯ ಹಾಗೂ ಬಲವಾದ ನೆಲೆ ಎಂದು ಹೆಸರಾದ ಈ ರಾಜ್ಯದಲ್ಲೀಗ ಹಲವು ಗಿರಣಿಗಳು ಮುಚ್ಚಿರುವುದರಿಂದಾಗಿ ಸುಮಾರು 70 ಸಾವಿರ ಗಿರಣಿ ಕಾರ್ಮಿಕರು ಬೀದಿಗೆಸೆಯಲ್ಪಟ್ಟಿದ್ದಾರೆ. ಇದರೊಂದಿಗೆ ಪ್ರತಿವರ್ಷ ನಿರುದ್ಯೋಗಿಗಳ ಸೇನೆಗೆ ಸೇರುತ್ತಿರುವ ಮಧ್ಯಮ ವರ್ಗದ ಹಾಗೂ ಕಾರ್ಮಿಕ ವರ್ಗದ ಯುವಕರು. ಈ ಜನ ವಿಭಾಗದ ತೀವ್ರ ಆರ್ಥಿಕ ಹತಾಶೆ ಆಗಾಗ ಕೋಮು ಪ್ರಜ್ಞೆಯನ್ನು ತೋರ್ಪಡಿಸಿಕೊಳ್ಳುವ ರೂಪದಲ್ಲಿ ವ್ಯಕ್ತಗೊಳ್ಳುತ್ತಿದೆ.

2) ಪಾನನಿರೋಧದ ಗುಜರಾತಿನಲ್ಲಿ ಕಳ್ಳಬಟ್ಟಿ ಉದ್ಯಮಿಗಳ ಹಾಗೂ ಕರಾವಳಿ ಪಟ್ಟಣಗಳಲ್ಲಿ ಸಕ್ರಿಯವಾಗಿರುವ ಕಳ್ಳ ಸಾಗಾಣಿಕೆದಾರರ ಒಂದು ಹೊಸ ಕ್ರಿಮಿನಲ್ ವರ್ಗ ಹುಟ್ಟಿಕೊಂಡಿದೆ. ಇವರಿಗೆ ತಮ್ಮ ಅಕ್ರಮ ಕೆಲಸಗಳನ್ನು ಮರೆ ಮಾಚಲು ಅದರಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಧರ್ಮ ಒಂದು ಉಪಯೋಗಿ ಸಾಧನವಾಗಿ ಉಪಯೋಗವಾಗುತ್ತಿದೆ,

3. ಕೊನೆಯದಾಗಿ, ಆಳುವ

(6ನೇ ಪುಟ ನೋಡಿ)

ಸುದ್ಧಿ-ಸಮಾಚಾರ ವಿವಿಧ ರಾಜ್ಯಗಳಿಂದ

ಪಶ್ಚಿಮ ಬಂಗಾಳ :

# ಆಗಸ್ಟ್ 7ರಂದು ಯಶಸ್ವಿ ಬಂದ್, ಮುಷ್ಕರ

ಕೇಂದ್ರ ಕಾರ್ಮಿಕ ಸಂಘಟನೆಗಳು, ಪಶ್ಚಿಮ ಬಂಗಾಳದ ಎಡರೈತ ಸಂಘಟನೆಗಳು ಹಾಗೂ ಎಡರಂಗ ನೀಡಿದ ಸೆಣಬು ಉದ್ಯಮದಲ್ಲಿ ಮುಷ್ಕರ ಹಾಗೂ ಸಂಪೂರ್ಣ 'ಗ್ರಾಮಾಂತರ, ಪಶ್ಚಿಮ ಬಂಗಾಲ ಬಂದ್' ನ ಕರೆಗೆ ಆಗಸ್ಟ್ 7ರಂದು ಗ್ರಾಮೀಣ ಜನತೆಯ, ಸೆಣಬು ಕಾರ್ಮಿಕರ, ಸೆಣಬು ಬೆಳೆಗಾರರ ಹಾಗೂ ಇತರ ಜನವಿಭಾಗಗಳ ಅತ್ಯುತ್ಸಾಹದ ಬೆಂಬಲ ವ್ಯಕ್ತಗೊಂಡಿತು. ಮುಷ್ಕರ ಹಾಗೂ ಬಂದ್ ಸಂಪೂರ್ಣಯಶಸ್ವಿಯಾಯಿತು. ಕಾಂಗ್ರೆಸ್ (ಐ) ಇದನ್ನು ವಿರೋಧಿಸಿದ್ದರೂ ಇಂಟಕ್ ಈ ಬಂದ್ ಹಾಗೂ ಮುಷ್ಕರಕ್ಕೆ ಬೆಂಬಲ ನೀಡಿದ್ದು ಪಶ್ಚಿಮ ಬಂಗಾಳದ ಗ್ರಾಮೀಣ ಜನಜೀವನ ಹಾಗೂ ಸೆಣಬು ಉದ್ಯಮ ಸಂಪೂರ್ಣವಾಗಿ ಸ್ತಬ್ಧಗೊಂಡವು. ಇದೇ ಸೆಣಬು ಉದ್ಯಮಿಗಳ ಪತ್ರಿಕೆಗಳೂ ಹಾಗೂ ಸರಕಾರೀ ಪ್ರಸಾರ ಮಾಧ್ಯಮಗಳೂ ಒಪ್ಪಿಕೊಳ್ಳಬೇಕಾಯಿತು.

ಸೆಣಬು ಉದ್ಯಮದಲ್ಲಿ ಬಿಕ್ಕಟ್ಟು ತಂದು ಸೆಣಬು ಬೆಳೆಗಾರರು ಹಾಗೂ ಸೆಣಬು ಕಾರ್ಮಿಕರನ್ನು ಹೇಳತೀರದ ಸಂಕಷ್ಟಗಳಿಗೆ ಗುರಿಪಡಿಸಿದ ಕಾಂಗ್ರೆಸ್ (ಐ) ಕೇಂದ್ರ ಸರಕಾರದ ತಪ್ಪು ದೃಷ್ಟಿಕೋನದ ವಿರುದ್ಧ ಜನತೆಯ ಪ್ರತಿಭಟನೆಯನ್ನು ತೋರ್ಪಡಿಸಲು ಈ ಕೈಗಾರಿಕಾ ಮುಷ್ಕರ ಹಾಗೂ ಗ್ರಾಮಾಂತರ ಬಂದ್‌ಗೆ ಕರೆ ನೀಡಲಾಗಿತ್ತು. ಸೆಣಬು ನಾರುಗಳ ಬದಲು ಚೀಲ ತಯಾರಿಸಲು ಬಳಸುತ್ತಿರುವ ಕೃತಕ ನೂಲುಗಳ ಆಮದು ನಿಲ್ಲಿಸಬೇಕು, ಕಚ್ಚಾ ಹಾಗೂ ಮೆಸ್ತಾ ಸೆಣಬಿಗೆ ಅನುಕ್ರಮವಾಗಿ 600ರೂ ಹಾಗೂ 400ರೂ. ಕನಿಷ್ಟ ಕೊಳ್ಳುವ ಬೆಲೆಯನ್ನು ನಿಗದಿಪಡಿಸಬೇಕು, ಸಮಸ್ತ ಸೆಣಬು ಉದ್ಯಮವನ್ನು ರಾಷ್ಟ್ರೀಕರಿಸಬೇಕು, ಕಚ್ಚಾ ಸೆಣಬಿನ ಸಗಟು ವಿದೇಶ ವ್ಯಾಪಾರವನ್ನು ರಾಷ್ಟ್ರೀಕರಿಸಬೇಕು, ಮುಚ್ಚಿದ ಸೆಣಬು ಕಾರ್ಖಾನೆಗಳನ್ನು ತೆರೆಯಬೇಕು ಹಾಗೂ ಸೆಣಬು ಕಾರ್ಮಿಕರ ಮೇಲಿನ ಹಲ್ಲೆಗಳನ್ನು ತಕ್ಷಣ ನಿಲ್ಲಿಸಬೇಕು-ಇವೇ ಬಂದ್ ಹಾಗೂ ಮುಷ್ಕರಕ್ಕೆ ಕರೆನೀಡಿದವರ ಜಂಟೀ ಬೇಡಿಕೆಗಳಾಗಿದ್ದವು.

ಈ ಯಶಸ್ವೀ ಬಂದ್‌ನೊಂದಿಗಷ್ಟೆ ಈ ಚಳುವಳಿ ಮುಗಿದಿಲ್ಲ. ಜನತೆಯ ಈ ಬೇಡಿಕೆಗಳತ್ತ, ರಾಜ್ಯದ ಆರ್ಥಿಕದ ಮೇಲೆ ತೀವ್ರ ಪರಿಣಾಮ ಬೀರುವ ಈ ಸಮಸ್ಯೆಗಳತ್ತ ಕೇಂದ್ರ ಸರಕಾರ ಗಮನ ಹರಿಸಲು ಇನ್ನೂ ನಿರಾಕರಿಸಿದರೆ ಸಮಸ್ತ ಬಂಗಾಲ ಬಂದ್ ನಡೆಸಲು ಕೂಡಾ ಯೋಜಿಸಲಾಗಿದೆ.

# ರಾಯಚೂರಿನಲ್ಲಿ ರೈತರ ಚಳುವಳಿ

## "ಕಾಲ್ನಡಿಗೆ ಜಾತಾಗಳು ಶ್ರೀಮಂತ ಅನುಭವ ನೀಡಿದವು"

ಕಳೆದ ನಾಲ್ಕೈದು ವರ್ಷಗಳ ಹಿಂದೆ ಕಾ. ಕಿಸಾನ್ ಸಭಾದ ಧೀಮಂತ ನಾಯಕ ಎ. ಕೆ. ಗೋಪಾಲನ್, ಇವರ ಜೀವನ ಚರಿತ್ರೆಯನ್ನು ಓದುವಾಗ, ಅವರ ಹೋರಾಟಗಳುದ್ದಕ್ಕೂ ನಡೆಸಿದ ಜಾತಾಗಳು ನನ್ನ ಮೇಲೆ ಅಚ್ಚಳಿಯದ ಪ್ರಭಾವ ಬೀರಿದವು. ನಾಲ್ಕು ವರ್ಷಗಳ ಹಿಂದೆಯೇ ಜಿಲ್ಲೆಯ ಕೊಪ್ಪಳದಿಂದ ರೈತರ ಕಾಲು ಜಾತಾವನ್ನು ರಾಯಚೂರಿಗೆ ತೆಗೆಯಬೇಕೆಂದು ಆಲೋಚಿಸಿದೆವಾದರೂ ಕಾರ್ಯಗತವಾಗಲಿಲ್ಲ.

ಈ ಮಧ್ಯದಲ್ಲಿ ಕಾರ್ಯಕರ್ತರ ಜಾತಾವನ್ನು, ಸೈಕಲ್ ಜಾತಾವನ್ನು ಟ್ರಾಕ್ಟರ್ ಜಾತಾವನ್ನು ನಡೆಸಲಾಯಿತು. ಹೊಸ ಅನುಭವವನ್ನು ಪಡೆಯಲಾಯಿತು. ಆದರೆ ಹತ್ತಾರು ಮಂದಿ ಕಾರ್ಯಕರ್ತರು ಹಳ್ಳಿಯಿಂದ ಹಳ್ಳಿಗೆ ಹೋಗುವುದಕ್ಕೂ, ನೂರಾರು ರೈತರ ಜೊತೆ ಹಳ್ಳಿಯಿಂದ ಹಳ್ಳಿಗೆ ಹೋಗುವುದಕ್ಕೂ ಬಹಳ ಅಂತರವಿದೆ. ಆಗಸ್ಟ್ ಒಂದರಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಸಿದ ಧರಣಿಗೆ ಮೊದಲು ಇಡೀ ಜಿಲ್ಲೆಯ ಮೂರು ಪ್ರದೇಶಗಳನ್ನು ಒಳಗೊಳ್ಳುವಂತೆ ಮೂರು ಜಾತಾಗಳನ್ನು ಸಂಘಟಿಸುವಂತಾಯಿತು.

### ಜಾತಾ ಅನುಭವ

ರೈತರನ್ನು ಜಾತಾದಲ್ಲಿ ಪಾಲುಗೊಳ್ಳುವಂತೆ ಮಾಡಲು, ನಾವಿಟ್ಟ ಬೇಡಿಕೆಗಳು ಅವರನ್ನು ಸ್ಪಂದಿಸುತ್ತವೆಯೋ, ಇಲ್ಲವೋ ಎಂಬುದನ್ನು ಓರೆಗಲ್ಲಿಗೆ ಹಚ್ಚುತ್ತದೆ. ವಾರಣಾಸಿ ಕಿಸಾನ ಸಭಾ ಸಮ್ಮೇಳನದ ಹೇಳಿಕೆಯಂತೆ ರೈತರೇ ತಮ್ಮ ಬೇಡಿಕೆಗಳನ್ನು ಮಂಡಿಸಲು, ಅವರ ಜೊತೆ ಚರ್ಚೆಗೆ ಇಳಿದಾಗ ಮಾತ್ರ ಸಾಧ್ಯ. ಇದನ್ನು ಜಾರಿಗೆ ತರಲು ಪ್ರಯತ್ನಿಸಲಾಯಿತು.

ಜಿಲ್ಲಾ ಸಮಿತಿ, ತಾಲ್ಲೂಕಾ ಸಮಿತಿ ಸಂಗಾತಿಗಳಿಗೆ ನೂರಾರು ರೈತರನ್ನು ಕಾಲು ಜಾತಾದಲ್ಲಿ ಪಾಲುಗೊಳ್ಳುವಂತೆ ಮಾಡುವ ಪ್ರಯತ್ನ ಒಂದಾದರೆ ಅವರಿಗೆ ದಾರಿಯುದ್ದಕ್ಕೂ ದಿನಾಲು ಎರಡು ಊಟ, ಮಲಗುವ ವ್ಯವಸ್ಥೆ ತಿಂಡಿ, ಕಾಫಿಯ ವ್ಯವಸ್ಥೆ ಮಾಡುವುದು ಸಾಮಾನ್ಯ ಕೆಲಸವಲ್ಲ, ನೂರು ಜನರಿಗೆ ತರಬೇತಿ ಶಿಬಿರಕ್ಕೆ, ಸಮ್ಮೇಳನಕ್ಕೆ ಊಟದ ವ್ಯವಸ್ಥೆ ಮಾಡಲು ವಾರಗಟ್ಟಲೆ ಸಮಯ ತೆಗೆದುಕೊಳ್ಳುವಾಗ, ಹತ್ತಾರು ದಿವಸಗಳಲ್ಲಿ ಹತ್ತಾರು ಊಟ, ಇತರ ವ್ಯವಸ್ಥೆಗಳನ್ನು ಮಾಡಲು ಮಾನಸಿಕವಾಗಿ, ದೈಹಿಕವಾಗಿ ಅತೀ ಚುರುಕಾಗುವ ಅವಶ್ಯಕತೆ ಬೀಳುತ್ತದೆ. ಯಾವ, ಯಾವ, ಹಳ್ಳಿಯಲ್ಲಿ ಜಾತಾಕ್ಕೆ ಊಟ, ತಂಗುವ ವ್ಯವಸ್ಥೆ ಮಾಡಬೇಕಾಗಿದೆಯೋ, ಅಲ್ಲಿಯ ರಾಜಕೀಯ, ರೈತ ವಿಭಾಗಗಳ, ಜಾತಿಗಳ, ಎಲ್ಲಾ ಹಿನ್ನೆಲೆಯನ್ನು ಅರಿಯುವ ಅನಿವಾರ್ಯತೆ ಉಂಟಾಗುತ್ತದೆ ಊರಲ್ಲಿ ಗುಂಪುಗಾರಿಕೆ, ಪಾರ್ಟಿ ಪಂಗಡಗಳಿದ್ದರೆ ಯಾರನ್ನು ಸಂಪರ್ಕಿಸಬೇಕು, ಹೇಗೆ, ಯಾರ, ಮುಖಾಂತರ ಸಂಪರ್ಕಿಸಬೇಕೆಂದು ಆಲೋಚಿಸಿ ತಂತ್ರವನ್ನು ರೂಪಿಸಬೇಕಾಗುತ್ತದೆ.

ನಮಗೆ ಬೇಕಾಗಿರಲಿ, ಬೇಡವಾಗಲಿ ಅಲ್ಲಿಯ ಮಧ್ಯಮ, ಶ್ರೀಮಂತ ರೈತ ವಿಭಾಗಗಳನ್ನು ವಿಶಾಲವಾಗಿ ಎಲ್ಲಾ ರಾಜಕೀಯಕ್ಕೆ ಸೇರಿದ ರೈತರನ್ನು ಸಂಪರ್ಕಿಸಬೇಕಾಗುತ್ತದೆ. ಅವರು ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ನೀಡಲು ತಯಾರಿ ಮಾಡಿಕೊಳ್ಳಲೇಬೇಕಾಗುತ್ತದೆ. ಆಗ ಅನಿವಾರ್ಯವಾಗಿ ನಮ್ಮ ಸಂಗಾತಿಗಳು ರಾಜಕೀಯವಾಗಿ, ಸೈದ್ಧಾಂತಿಕವಾಗಿ ಸ್ವಲ್ಪ ಮಟ್ಟಿಗಾದರೂ ಪರಿಣತಿ ಪಡೆಯುವ ಅವಶ್ಯಕತೆ ಬೀಳುತ್ತದೆ, ಇಲ್ಲವಾದಲ್ಲಿ ಅವರ ಮೇಲೆ ಪ್ರಭಾವ ಬೀರಲು, ಮನವೊಲಿಸಲು, ಕಷ್ಟವಾಗುತ್ತದೆ. ಸಂಘಟನೆಯ ಅವಶ್ಯಕತೆಯನ್ನು ಯಾವ, ಯಾವ, ವಿಭಾಗದ ಜನ ಆಶೆಯನ್ನು ತೋರುತ್ತಾರೆ ಅಥವಾ ಅಲಕ್ಷಿಸುತ್ತಾರೆ ಅಥವಾ ವಿರೋಧಿಸುತ್ತಾರೆಂದು ಅರಿಯಲು ಸಹಾಯವಾಗುತ್ತದೆ.

### ಊರಿಗೆ ಊರೇ ಸ್ಪಂದಿಸುತ್ತದೆ

ನೂರಾರು ರೈತ ಸಂಗಾತಿಗಳು ಜಾತಾದಲ್ಲಿ ಪಾಲುಗೊಂಡವರ ಕುಶಲತೆ, ಆರೋಗ್ಯ ನೋಡಿಕೊಳ್ಳುವದು, ಅವರನ್ನು ಜಾತಾದಲ್ಲಿ ಹೆಚ್ಚೆಚ್ಚು ಸ್ಫೂರ್ತಿ ಪಡೆಯುವಂತೆ ಚರ್ಚೆ, ಭಾಷಣ, ಮಾಡುವ ಅವಶ್ಯಕತೆ ಬೀಳುತ್ತದೆ. ಹಾದಿಯಲ್ಲಿ ಬರುವ ಪ್ರತಿಯೊಂದು ಗ್ರಾಮದಲ್ಲಿ, ಜಾತಾದ ರೈತರನ್ನು ಬ್ಯಾನರ್ ಹಿಡಿದು ಘೋಷಣೆಗಳನ್ನು ಹಾಕುತ್ತಾ, ಗ್ರಾಮದ ಎಲ್ಲಾ ಬೀದಿಗಳಲ್ಲಿ ಹಾಯ್ದು ಬರುವಾಗ ಹೊಸ ವಾತಾವರಣವೇ ನಿರ್ಮಾಣವಾಗಿ, ಗ್ರಾಮದ ರೈತರು ತಮಗೆ ಅರಿವಿಲ್ಲದೆಯೇ ಸಭೆ ನಡೆಯುವ ಸ್ಥಳಕ್ಕೆ ಜಾತಾ ಗುಂಪಿನ ಜೊತೆ ಸೇರಿ ಒಂದಾತ್ತಾರೆ. ತಮ್ಮ ಊರಿನ ಜಾತ್ರೆಗಳನ್ನು ನಡೆಸುವಂತೆ, ಹಲಗೆ, ಡೊಳ್ಳು, ಕುಣಿತ, ಕೇಕೆಗಳೊಂದಿಗೆ ಜನ ಭಾಗವಹಿಸುತ್ತಾರೆ.

ಸಭೆಯಲ್ಲಿ ಭಾಷಣ ಮಾಡುವಾಗ ಜಾತಾದ ಉದ್ದೇಶ, ಬೇಡಿಕೆಗಳನ್ನು ವಿವರಿಸುವುದರ ಜೊತೆಗೆ ರೈತ ಸಂಘಟನೆಯ ಚರಿತ್ರೆ, ಹೋರಾಟ, ಧೋರಣೆಗಳನ್ನು ವಿಶಾಲವಾದ ರೈತ ವಿಭಾಗಕ್ಕೆ ಮನವರಿಕೆ ಮಾಡಿಕೊಡುವ ಅವಶ್ಯಕತೆ ಬೀಳುತ್ತದೆ. ಆದರೆ ಒಂದು ಗಮನಿಸಬೇಕಾದ ಅಂಶವೆಂದರೆ ಒಂದೇ ರೀತಿಯ ಟೇಪ್‌ರಿಕಾರ್ಡ್ ಭಾಷಣವಾದರೆ, ನಮ್ಮ ಜೊತೆಯಲ್ಲಿಯೇ ಇರುವ ನೂರಾರು ಸಂಗಾತಿಗಳಿಗೆ ಸ್ಫೂರ್ತಿಕೊಡಲು ಸಾಧ್ಯವಾಗದು. ಕಾರಣ ಹೊಸ ವಿಧಾನ, ಶೈಲಿ, ಉದಾಹರಣೆಗಳು, ಹೋರಾಟಗಳ ಚರಿತ್ರೆ, ಪ್ರತಿಫಲಗಳನ್ನು ಜೀವಂತವಾಗಿ ಚಿತ್ರಿಸಲು ಸಾಧ್ಯವಾಗಬೇಕಾಗುತ್ತದೆ. ಇದರಿಂದ ಹೆಚ್ಚು ಅಭ್ಯಾಸ ಮಾಡಲು ಸಾಧ್ಯವಾಗುವುದರ ಜೊತೆ ನಮ್ಮಲ್ಲಿರುವ ಕೊರತೆಯನ್ನು ಅರಿಯಲು ಕೂಡ ಸಾಧ್ಯವಾಗುತ್ತದೆ.

ಹಲವಾರು ಕಾರ್ಯಕರ್ತ ಸಂಗಾತಿಗಳು ಈ ಜಾತಾದಿಂದ ಪಳಗುತ್ತಾರೆ, ಹಲವರು ಹೊಸಬರು ಕಾರ್ಯ ಕರ್ತರಾಗಿ ಮುಂದೆ ಬರುತ್ತಾರೆ, ಜಾತಾದುದ್ದಕ್ಕೂ ಚರ್ಚೆಗಳು ಹಾಗೂ ಎಲ್ಲಾ ಗ್ರಾಮದ ರೈತರ ಸಮಸ್ಯೆಗಳೂ ಸಮಾನವಾಗಿವೆ ಎಲ್ಲಾ ಜನ ಸಾಮಾನ್ಯರಿಗೂ ಬಂಡವಾಳಶಾಹಿ – ಭೂ ಮಾ ಲೀ ಕ ವ್ಯವಸ್ಥೆ ಶತೃವಾಗಿದೆ ಎಂಬ ತಿಳುವಳಿಕೆಯನ್ನು ಗ್ರಾಮವನ್ನು ಮೀರಿ ವಿಶಾಲ ರೈತಾಪಿ ವರ್ಗದ ಹೋರಾಟದ ಅನುಭವವನ್ನು ಅವರಿಗೆ ಪಡೆಯಲು ಸಾಧ್ಯವಾಗುತ್ತದೆ. ಜಾತಿ, ಧರ್ಮಗಳನ್ನು ಮೀರಿ ವರ್ಗದ ಆಧಾರದಲ್ಲಿ ಸಮಸ್ಯೆಗಳ ಆಧಾರದಲ್ಲಿ ಸಂಗಾತಿಗಳನ್ನು ನೋಡುವಂತೆ ಮಾಡಲು ಸಾಧ್ಯವಾಗುತ್ತದೆ.

ಸಂಗಾತಿಗಳಿಗೆ ಭಾಷಣ ಮಾಡುವ ಅನುಭವ ಪಡೆಯಲು, ಅವರ ಭಾಷಣದಲ್ಲಿರುವ ಕೊರತೆಯನ್ನು ತುಂಬಲು ಕಾರ್ಯಕರ್ತರ ಪ್ರತಿಯೊಂದು ಚಲನವಲನಗಳಿಂದ ಅವರಲ್ಲಿರುವ ಉತ್ತಮ ಲಕ್ಷಣಗಳನ್ನು ಗುರುತಿಸಲು, ಕೊರತೆಗಳನ್ನು ತಿದ್ದಲು ಬಹಳ ಸಹಕಾರಿಯಾಗುತ್ತದೆ. ಹೊಸ ಸಂಗಾತಿಗಳು ಭಾಷಣ ಮಾಡುವ ಆಶಯವನ್ನು ಪ್ರದರ್ಶಿಸಿ ಪ್ರಯತ್ನಿಸಿ ಜಾತಾ ಮುಗಿಯುವುದರೊಳಗೆ ನಮ್ಮ ಸಂಘಟನೆಯ ಧ್ಯೇಯಗಳ ಉತ್ತಮ ಪ್ರತಿಪಾದಕರಾಗಿ ತಯಾರಾಗಿದ್ದಾರೆ.

ಗ್ರಾಮದಿಂದ ಗ್ರಾಮಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಹಲವಾರು ವಿಭಿನ್ನ ಭೂಸಂಬಂಧಗಳು, ಬೆಳವಣಿಗೆಗಳನ್ನು ವಿವರಿಸಿ, ಸಮಸ್ಯೆಗಳ ಆಧಾರದಲ್ಲಿ ಘೋಷಣೆಗಳನ್ನು ಹೇಗೆ,ಏಕೆ ರೂಪಿಸುವುದೆಂದು ಕಾರ್ಯಕರ್ತ ಸಂಗಾತಿಗಳಿಗೆ ಮನವರಿಕೆ ಮಾಡಿಕೊಡಲು, ಅದರ ಪ್ರಾಮುಖ್ಯತೆಯನ್ನು ಅರಿವು ಮಾಡಿಕೊಡಲು ಸಾಧ್ಯವಾಗುತ್ತದೆ.

ಗ್ರಾಮ ಮಟ್ಟದಲ್ಲಿ ಚಟುವಟಿಕೆಯಲ್ಲಿರುವ ಹಲವಾರು ರೈತ ಸಂಘ ಇತರ ಸಂಘ, ಸಂಸ್ಥೆಗಳ ಪರಿಚಯ, ಅವುಗಳ ಉದ್ದೇಶಗಳನ್ನು ಅರಿಯಲು, ಅಂತಹ ಸಂಘಟನೆಗಳನ್ನು ಜಂಟೀ ಹೋರಾಟಕ್ಕೆ ಇಳಿಸಲು, ಚರ್ಚಿಸಲು ಸಹಕಾರಿಯಾಗುತ್ತದೆ.

### ರೈತರ ಮಧ್ಯೆ ತೀವ್ರ ಚರ್ಚೆ

ಇದಲ್ಲದೆ ಸಾವಿರಾರು ಜನ ರೈತರು ಸಂಘಟನೆಯ ಒಳಗೆ ಬರದೆ ಇರುವವರು, ಜಾತಾ ಬರುವ ಮೂರು ನಾಲ್ಕು ದಿವಸ ಪೂರ್ವದಲ್ಲಿಯೇ, ಜಾತಾವೆಂದರೇನು ಯಾಕೆ ಜಾತಾ ಮಾಡುತ್ತಾರೆ, ಯಾರು ಮಾಡುತ್ತಾರೆ ಎಲ್ಲಿಗೆ ಹೋಗುತ್ತಾರೆ, ಸಮಸ್ಯೆಗಳೇನು ಎಂದು ಚರ್ಚೆಗೆ ಇಳಿಯುತ್ತಾರೆ. ಜಾತಾದಲ್ಲಿ ಬರುವವರೆಷ್ಟು, ಎಷ್ಟು ಊಟ, ತಿಂಡಿ, ಚಹಾ, ಮಲಗಲು ಸ್ಥಳ, ಹಾಸಿಗೆ, ಮೈಕ್, ಅವುಗಳ ಸಂಗ್ರಹಣೆ, ಅಡಿಗೆ ತಯಾರಿ, ಸ್ಥಳದ ಪ್ರಶ್ನೆ, ಅಡಿಗೆ ಮಾಡುವರು, ನೀಡುವವರು, ಸ್ವಾಗತ ಮಾಡುವವರು, ಸ್ವಾಗತ ಮಾಡುವ ವಿಧಾನ, ಇವುಗಳ ಚರ್ಚೆಯಲ್ಲದೆ ಇವುಗಳನ್ನು ಕಾರ್ಯಗತ ಮಾಡಲು ಪ್ರತಿ ಹಳ್ಳಿಗೆ ನೂರಾರು ರೈತ, ಕೂಲಿಗಾರರು ಭಾಗವಹಿಸುವ ಮುಖಾಂತರ ಜಾತಾದುದ್ದಕ್ಕೂ ಸಾವಿರಾರು ಜನ ಜಾತಾವನ್ನು ಯಶಸ್ವಿಗೊಳಿಸುವ ಮುಖಾಂತರ ರೈತ ಸಂಘಟನೆಯ ವ್ಯಾಪ್ತಿಗೆ ಹೊಸ ಸಮೂಹ ಒಳಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತದೆ.

—ಚಂದ್ರಶೇಖರ ಬಾಳೆ.

# ನಿರುದ್ಯೋಗದ ವಿರುದ್ಧ ಸತ್ಯಾಗ್ರಹ

ಸಿ.ಐ.ಟಿ.ಯು ರಾಜ್ಯ ಸಮಿತಿ ಕೊಟ್ಟ ಕರೆಯ ಮೇರೆಗೆ ಬೆಂಗಳೂರಿನಲ್ಲಿ ಆಗಸ್ಟ 8ರಂದು ನಿರುದ್ಯೋಗ ವಿರೋಧಿ ಧರಣಿ ಸತ್ಯಾಗ್ರಹ ನಡೆಯಿತು. ಬೆಳಿಗ್ಗೆ 11ಗಂಟೆಗೆ ನಗರದ ಚಿಕ್ಕಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕಗಳಿಂದ ಹೊರಟ ಎರಡು ಮೆರವಣಿಗೆಗಳು ಜನತಾ ಬಜಾರ್ ಮತ್ತು ಸುಬ್ಬಯ್ಯ ಸರ್ಕಲ್ ಬಳಿ ಇರುವ ಎರಡು ಉದ್ಯೋಗ ವಿನಿಮಯ ಕಚೇರಿಗಳ ಎದುರು ಪ್ರತಿಭಟನಾ ಪ್ರದರ್ಶನ ಮತ್ತು ಧರಣಿ ಸತ್ಯಾಗ್ರಹ ನಡೆಸಿತು. ಪ್ರದರ್ಶನಕಾರರನ್ನುದ್ದೇಶಿಸಿ ಸಿ.ಐ.ಟಿ.ಯು. ಮುಖಂಡರುಗಳಾದ ಕಾ. ಎಸ್. ಸೂರ್ಯನಾರಾಯಣರಾವ್, ಟಿ.ಎಸ್. ಅನಂತರಾಮ್, ಆರ್. ಶ್ರೀನಿವಾಸ್, ಪಿ.ಕೆ. ಸುಬ್ರಮಣಿ, ಕೆ.ಎಸ್ ಸುಬ್ರಮಣಿ ಹಾಗೂ ಜಾನ್ ವಿನ್ಸೆಂಟ್ ಅವರುಗಳು ಭಾಷಣ ಮಾಡಿದರು.

ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಬೆಳೆಯುತ್ತಿರುವ ನಿರುದ್ಯೋಗವನ್ನು ಬಗೆಹರಿಸುವಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ವಿಫಲವಾಗಿರುವುದನ್ನು ಖಂಡಿಸಿದ ಭಾಷಣಕಾರರು ಈ ಸಮಸ್ಯೆಯನ್ನು ಸಿ.ಐ.ಟಿ.ಯು. ಗಂಭೀರವಾಗಿ ಪರಿಗಣಿಸಿದೆ ಎಂದು ಹೇಳಿದರು. ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ಸರ್ಕಾರವು ಹಣ ಮಂಜೂರು ಮಾಡದೆ ದ್ರೋಹ ಬಗೆಯುತ್ತಿದೆಯೆಂದೂ, ವಿಜಯನಗರ ಉಕ್ಕಿನ ಕಾರ್ಖಾನೆ, ಮಂಗಳೂರು ತೈಲಾಗಾರ, ಬ್ರಾಡ್‌ಗೇಜ್ ರೈಲ್ವೇ ಮುಂತಾದ ಕಾರ್ಯಗಳನ್ನು ತ್ವರಿತವಾಗಿ ಜ್ಯಾರಿಗೊಳಿಸಬೇಕೆಂದು ಅವರು ಒತ್ತಾಯಿಸಿದರು. ಪ್ರದರ್ಶನಕಾರರ ಒಂದು ನಿಯೋಗ ಕಾರ್ಯಕ್ರಮದ ಕೊನೆಯಲ್ಲಿ ಉದ್ಯೋಗ ವಿನಿಮಯ ಕಛೇರಿಯ ಅಧಿಕಾರಿಗಳಿಗೆ ಬೇಡಿಕೆಗಳನ್ನೊಳಗೊಂಡ ಮನವಿಪತ್ರಗಳನ್ನು ಅರ್ಪಿಸಿದರೆಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

# ಸೋವಿಯತ್ ಸಮಾಜದಲ್ಲಿ ಕಾರ್ಮಿಕ ಸಂಘಟನೆ ಪ್ರಭಾವಶಾಲಿಯಾದ ಶಕ್ತಿ

(ಕೆಲವು ಅಂಶಗಳು)

**–ಎಂ. ಎನ್. ಉಗ್ರಪ್ಪ**

ಸೋವಿಯತ್ ರಷ್ಯ ಚಾರಿತ್ರಿಕವಾಗಿ ಕಡಿಮೆ ಅವಧಿಯಲ್ಲಿ ಸಾಮ್ರಾಜ್ಯವಾದಿ ದೇಶಗಳು ಮತ್ತು ಬಂಡವಾಳಶಾಹಿರಾಷ್ಟ್ರಗಳು ಅನೇಕ ಶತಮಾನಗಳಿಂದಲೂ ಬಗೆಹರಿಸಿಕೊಳ್ಳಲಾಗದ ರಾಜಕೀಯ, ಸಾಮಾಜಿಕ, ಆರ್ಥಿಕ, ಸೈದ್ಧಾಂತಿಕ, ನೈತಿಕ, ಭಾಷಾ, ಅಲ್ಪಸಂಖ್ಯಾತರು ಹೀಗೆ ವಿವಿಧ ರಂಗಗಳ ಸಮಸ್ಯೆಗಳನ್ನು ಶಾಶ್ವತವಾಗಿ ಬಗೆಹರಿಸಿಕೊಂಡಿವೆ. ಬಂಡವಾಳ ಶಾಹಿ ರಾಜ್ಯಗಳಲ್ಲಿ ಸಾಮಾನ್ಯವಾಗಿ ಜನರು ಎದುರಿಸುತ್ತಿರುವ ನಿರುದ್ಯೋಗ, ಜೀವನವೆಚ್ಚದ ಏರಿಕೆ, ಆರ್ಥಿಕ ಬಿಕ್ಕಟ್ಟು ಸಾಮಾಜಿಕ ಪಿಡುಗು, ಮುಂತಾದ ಸಮಸ್ಯೆಗಳನ್ನು ಪ್ರಪಂಚದಲ್ಲಿ ಮೊಟ್ಟ ಮೊದಲನೆಯ ಬಾರಿಗೆ ಬಗೆಹರಿಸಿಕೊಂಡ ಸೋವಿಯತ್ ರಷ್ಯದ ಕಾರ್ಮಿಕ ತಾನೇ ನವ ಸಮಾಜದ ಸೃಷ್ಟಿಕರ್ತ ಎಂದು ಅರಿತುಕೊಂಡಿದ್ದಾನೆ. ದುಡಿಯುವ ಹಕ್ಕಿಗಾಗಿ, ಉಚಿತ ವಿದ್ಯಾಭ್ಯಾಸಕ್ಕಾಗಿ, ಉಚಿತ ವೈದ್ಯಕೀಯ ಸೌಲಭ್ಯಕ್ಕಾಗಿ, ನಿವೃತ್ತಿ ವೇತನಕ್ಕಾಗಿ, ನಿವೇಶನಗಳಿಗಾಗಿ, ಮತ್ತಿತರ ಮಾನವೀಯ ಸೌಲಭ್ಯಗಳಿಗಾಗಿ ಬಂಡವಾಳಶಾಹಿ ರಾಜ್ಯಗಳಲ್ಲಿ ಕಾರ್ಮಿಕರು ಇನ್ನೂ ಹೋರಾಡುತ್ತಿದ್ದರೆ ಮೇಲೆ ಕಾಣಿಸಿದ ಎಲ್ಲ ಸೌಲಭ್ಯಗಳನ್ನು ಸೋವಿಯತ್ ರಷ್ಯದ ಕಾರ್ಮಿಕ ಪಡೆದು ತನ್ನ ಶ್ರಮವೆಲ್ಲವೂ ಮಾನವನ ಏಳಿಗೆಗಾಗಿ ಮೀಸಲಾದದ್ದು ಎಂಬ ಧ್ಯೇಯವುಳ್ಳವನಾಗಿದ್ದಾನೆ, ಮತ್ತು ಅದಕ್ಕಾಗಿ ತನ್ನ ಶ್ರಮವನ್ನು ಸಂತೋಷದಿಂದ ಧಾರೆ ಎರೆಯುತ್ತಿದ್ದಾನೆ.

ತತ್ವ ಜ್ಞಾನಿಗಳನೇಕರು ಪ್ರಪಂಚವನ್ನು ನಾನಾ ರೀತಿಯಲ್ಲಿ ವಿವರಿಸಿದ್ದಾರೆ. ಆದರೆ ಪ್ರಪಂಚದ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನು ಯಾರೂ ಹೇಳಿಲ್ಲ, ಕೈಗಾರಿಕಾ ಕ್ರಾಂತಿಯ ನಂತರ ಕಾಲ್ಪನಿಕ ಸಮಾಜವಾದದ ಪ್ರಜ್ಞೆ ಹಲವಾರು ತತ್ವ ಜ್ಞಾನಿಗಳಲ್ಲಿ ಮೂಡಿಬಂದಿತ್ತಾದರೂ ವೈಜ್ಞಾನಿಕವಾಗಿ ಯಾರೂ ಅದನ್ನು ವಿವರಿಸಲಿಲ್ಲ. ದ್ವಂದ್ವಮಾನ ಭೌತಿಕ ಶಾಸ್ತ್ರದ ಆಧಾರದಲ್ಲಿ ವೈಜ್ಞಾನಿಕವಾಗಿ ಸಮಾಜದ ಬೆಳವಣಿಗೆಯನ್ನು ವಿವರಿಸಿದವರು ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸರು. ಮಾರ್ಕ್ಸವಾದದ ಆಧಾರದಲ್ಲಿ ಲೆನಿನ್ನರು ಸಾಮಾಜಿಕ ಉತ್ಪಾದನೆಯು ಸಮಾಜದ ಎಲ್ಲ ಸದಸ್ಯರಿಗೂ ಅವರ ಕಲ್ಯಾಣಕ್ಕಾಗಿ ಮತ್ತು ಎಲ್ಲ ರಂಗಗಳ ಅಭಿವೃದ್ಧಿಗಾಗಿ ಮೀಸಲಾಗಿದೆ ಎಂಬ ಅಂಶವನ್ನು ಮನದಟ್ಟು ಮಾಡಿದ್ದಾರೆ.

ಸೋವಿಯತ್ ರಷ್ಯದಲ್ಲಿ ಕಾರ್ಮಿಕ ಸಂಘಗಳು ಸಮಾಜದ ಅಭಿವೃದ್ಧಿಗೆ ಫಲದಾಯಕವಾದ ಕೆಲಸಗಳನ್ನು ನಿರ್ವಹಿಸಲು ಸೀಮಿತವಲ್ಲದಷ್ಟು ಅವಕಾಶಗಳನ್ನು ಹೊಂದಿವೆ. ಇಂದು ಅವು ಪ್ರತಿನಿತ್ಯದ ಎಲ್ಲ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿರತವಾಗಿದೆ.

ಹೊರ ದೇಶದವರು ಕೆಲವು ಪ್ರಶ್ನೆಗಳನ್ನು ಹಾಕುತ್ತಾರೆ.

1) ಜೀವ ವಿಮಾ ಯೋಜನೆಗೂ ಕಾರ್ಮಿಕ ಸಂಘಗಳಿಗೂ ಏನುಸಂಬಂಧ. ಕಾರ್ಮಿಕ ಸಂಘಗಳಿಗೇಕೆ ಅದರಲ್ಲಿ ಆಸಕ್ತಿ ?

2) ಸೋವಿಯತ್ ಒಕ್ಕೂಟದಲ್ಲಿ ಕಾರ್ಮಿಕ ಸಂಘಗಳು ತಾಂತ್ರಿಕ ಸಂಶೋಧನೆ ಹೊಸ ವಿಧಾನಗಳ ಹುಡುಕುವಿಕೆಯಲ್ಲಿ ಆಸಕ್ತಿ ವಹಿಸುತ್ತವೆ. ಇದು ಏಕೆ ಬೇಕು ? ಕಾರ್ಮಿಕರು ಸಂಶೋಧನಾ ವಿಜ್ಞಾನಿಗಳೇ ?

3) ಬಂಡವಾಳಶಾಹಿ ರಾಷ್ಟ್ರಗಳ ಕಾರ್ಮಿಕ ಸಂಘಗಳು ಮಾಲಕ ವರ್ಗವನ್ನು ಮತ್ತು ಪ್ರಭುತ್ವವನ್ನು ಎದುರಿಸಿ ಹೋರಾಡುತ್ತವೆ. ಸೋವಿಯತ್ ರಷ್ಯದಲ್ಲೂ ಕಾರ್ಮಿಕ ಸಂಘಗಳು ಏಕೆ ಹಾಗೆ ಮಾಡುವುದಿಲ್ಲ ?

ಬಂಡವಾಳ ಶಾಹಿ ರಾಜ್ಯಗಳ ಕಾರ್ಮಿಕರು ಈ ರೀತಿಯ ಸಂಶಯಗ್ರಸ್ತರಾಗಿ, ಸೋವಿಯತ್ ರಷ್ಯದಲ್ಲಿಗ ಕಾರ್ಮಿಕ ಸಂಘಗಳು ಸರ್ಕಾರದ ಕೈಗೊಂಬೆ ಎಂಬ ಅಭಿಪ್ರಾಯಕ್ಕೆ ದಿಢೀರನೆ ಬರುವುದರಲ್ಲಿ ಆಶ್ಚರ್ಯವೇನಲ್ಲ.- ಇವರಿಗೆ ಕೆಲವು ವಾಸ್ತವಾಂಶಗಳು ತಿಳಿಯದಿರುವುದೇ ಇದಕ್ಕೆ ಕಾರಣ.

1917ರ ಅಕ್ಟೋಬರ್ ಸಮಾಜವಾದಿ ಕ್ರಾಂತಿಯವರೆವಿಗೂ ರಷ್ಯ ದೇಶದಲ್ಲಿ ಕಾರ್ಮಿಕ ಸಂಘಗಳು ಅಂದಿನ ಪ್ರಭುತ್ವಗಳನ್ನು ಎದುರಿಸಿ ಹೋರಾಡುತ್ತಿದ್ದವು. 20ನೇ ಶತಮಾನದ ಆದಿ ಭಾಗದಲ್ಲಿ ಪ್ರಪಂಚದಲ್ಲೆಲ್ಲಾ ನಡೆದ ಕಾರ್ಮಿಕ ಮುಷ್ಕರಗಳಲ್ಲಿ ರಷ್ಯ ಮೊದಲ ಸ್ಥಾನ ಪಡೆದಿತ್ತು. ನಾಲ್ಕು ಲಕ್ಷ ಕಾರ್ಮಿಕರು ಮಾಸ್ಕೊ ನಗರದಲ್ಲಿ ಮುಷ್ಕರ ನಡೆಸಿದ್ದರು ಇವರಿಗೆ ಸೌಹಾರ್ದ ಬೆಂಬಲಕ್ಕಾಗಿ ಪೆಟ್ರೋಗ್ರಾಡ್‌ನ, ಕಾರ್ಮಿಕರು, ಯುಕ್ರೇನಿನ ಲೋಹದ ಕಾರ್ಮಿಕರು, ಓಲ್ಗಾ, ಯೂರಲ್ಸ್ ಕೇಂದ್ರ ರಷ್ಯದ ಕಾರ್ಮಿಕರು ಮತ್ತಿತರ ಪ್ರದೇಶಗಳ ಕಾರ್ಮಿಕರು ಮುಷ್ಕರ ನಡೆಸಿದರು.

ಅಂದಿನ ರಷ್ಯದ ಆಡಳಿತ ವರ್ಗ ಮುಷ್ಕರಗಳಲ್ಲಿ ಭಾಗವಹಿಸಿದವರ ಮೇಲೆ, ಸಂಘಟನಾ ಕಾರ್ಯಕರ್ತರ ಮೇಲೆ, ದಬ್ಬಾಳಿಕೆ ನಡೆಸಿದರು, ಜೈಲಿಗೆ ದೂಡಿದರು, ಕಠಿಣ ಕೆಲಸ ಕೊಟ್ಟರು ಚಿತ್ರ ಹಿಂಸೆಗೆ ಗುರಿಪಡಿಸಿದರು. ಕಾರ್ಮಿಕ ವರ್ಗದ ಹೋರಾಟಗಳ ಕಮ್ಯೂನಿಸ್ಟ್ ಪಕ್ಷದ ಸದಸ್ಯರು, ಕಾರ್ಮಿಕ ಸಂಘಗಳ ಸಮಿತಿಯ ಸದಸ್ಯರು ಪುರೋಗಾಮಿ ಮುಂದಾಳುಗಳು ಮಾರ್ಗದರ್ಶನ ನೀಡಿದರು ಮತ್ತು ಎಲ್ಲ ಸಂಕಷ್ಟಗಳನ್ನು ಅನುಭವಿಸಿದರು.

ಆಳುವ ವರ್ಗ ಎಲ್ಲ ರೀತಿಯ ದಬ್ಬಾಳಿಕೆ ಕ್ರಮಗಳನ್ನು ಕೈಗೊಂಡರೂ ಜನತೆಯ ಕ್ರಾಂತಿಕಾರಿ ಚಟುವಟಿಕೆಗಳನ್ನು ತಡೆ ಹಿಡಿಯಲಾಗಲಿಲ್ಲ. ಕಾರ್ಮಿಕರು ಸಹಿಸಲಾಗದಷ್ಟು ಹಾಳಾದ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದರು. ಆಳುವ ವರ್ಗದ ಮತ್ತು ಮಾಲೀಕ ವರ್ಗದ ಸಂಧಾನ ತಂತ್ರ ಒಪ್ಪಲು ಕಾರ್ಮಿಕ ವರ್ಗ ಸಿದ್ಧವಿರಲಿಲ್ಲ. ಲೆನಿನ್ನರು ಸ್ಥಾಪಿಸಿದ ಕಮ್ಯೂನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ರಷ್ಯದ ಕಾರ್ಮಿಕ ವರ್ಗ ಸಶಸ್ತ್ರ ಹೋರಾಟನಳಿಗೂ ತಯಾರಾಗಿತ್ತು. ಬಂಡವಾಳ ಶಾಹಿ ವಿರುದ್ಧ ದೃಢನಿರ್ಧಾರದ ಹೋರಾಟಕ್ಕೆ ಸಿದ್ಧರಾಗಿದ್ದರು, ಈ ಹೋರಾಟಗಳಲ್ಲಿ ಕಾರ್ಮಿಕ ಸಂಘಗಳು ಸಕ್ರಿಯವಾಗಿ ಪಾತ್ರವಹಿಸಿದ್ದವು.

ಕ್ರಾಂತಿಯ ನಂತರ ಸೋವಿಯತ್ ಸರ್ಕಾರ ಸ್ಥಾಪಿತವಾದೊಡನೆಯೇ ಕಾರ್ಮಿಕವರ್ಗದ ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳು ಬದಲಾದವು. ಪ್ರತಿಯೊಬ್ಬ ಕಾರ್ಮಿಕನೂ ತನ್ನ ಕರ್ತವ್ಯವನ್ನು ನಿರ್ವಹಿಸುವುದರ ಮೂಲಕ, ಕ್ರಾಂತಿಯು ಜಯಭೇರಿ ಹೊಡೆದು ರಚಿತವಾದ ಸೋವಿಯೆತ್ ಸರ್ಕಾರಕ್ಕೆ ಬೆಂಬಲ ನೀಡಬೇಕೆಂಬ ನಿಲುವನ್ನು ತಾಳಿದ.

ಕಾರ್ಮಿಕವರ್ಗ ತನ್ನ ತುರ್ತು ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟವನ್ನು ಇನ್ನೂ ಮುಂದುವರಿಸಿದ್ದೇ ಆದಲ್ಲಿ ತನ್ನ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗುತ್ತಿತ್ತೇ ? ಇದು ಪ್ರಶ್ನೆ

ಉತ್ಪಾದನಾ ಸಾಧನಗಳ ಖಾಸಗಿ ಒಡೆತನವನ್ನು ಸಮಾಜ ಕ್ರಾಂತಿ ತೊಡೆದು ಹಾಕಿದೆ. ಎಲ್ಲ ಉತ್ಪಾದನ ಸಾಧನೆಗಳು ಕಾರ್ಮಿಕ ವರ್ಗದ ಸ್ವತ್ತಾಗಿ ಈಗ ಕಾರ್ಮಿಕವರ್ಗದ ಮಾಲೀಕರಿಗಾಗಿ ದುಡಿಯಬೇಕಾದುದ್ದಿಲ್ಲ. ಈಗ ದುಡಿಯಬೇಕಾದದ್ದು ಸಮಾಜಕ್ಕಾಗಿ ಮುಷ್ಕರಗಳು ಏಕೆ ಬೇಕು ? ಯಾರ ವಿರುದ್ಧ ಮುಷ್ಕರ ? ಕಾರ್ಮಿಕರ ವಿರುದ್ಧ ಕಾರ್ಮಿಕರ ಮುಷ್ಕರವೇ? ಎಂಬೆಲ್ಲ ಪ್ರಶ್ನೆಗಳು ತಿಳುವಳಿಕೆಗಳು ಮುಂದೆ ಬಂದು ನಿಂತವು.

ಸೋವಿಯತ್‌ಗಳೇ ರಾಜ್ಯವನ್ನು ಆಳುವ ಸಂಸ್ಥೆಗಳಾದವು ಕಾರ್ಮಿಕ ವರ್ಗದ ಪ್ರತಿನಿಧಿಗಳೇ ಇಲ್ಲಿ. ಶೋಷಣೆ ಮಾಡುವ ಜನರ ಮತದಾನದ ಹಕ್ಕನ್ನು ಕಿತ್ತುಹಾಕಲಾಯಿತು. ಕಾರ್ಮಿಕ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸಲಾಯಿತು. ಅನೇಕರಿಗೆ ರಾಜಕೀಯ ಮತ್ತು ಸಾಮಾಜಿಕ ಹಕ್ಕುಗಳು ದೊರೆತವು.ದೇಶವನ್ನು ಆಳುವ ಸದವಕಾಶವು ಕಾರ್ಮಿಕರಿಗೆ ಲಭ್ಯವಾಯಿತು. ರಾಷ್ಟ್ರದ ರಾಜಕೀಯ ಆರ್ಥಿಕ ಸಾಮಾಜಿಕ ಮತ್ತಿತರ ವ್ಯವಸ್ಥೆಗಳನ್ನು ಅವರೇ ಪರಿಹರಿಸುವಂತಾಯಿತು. ಈ ಸೋವಿಯತ್ ಶಕ್ತಿ ಕಾರ್ಮಿಕರಿಗೆ ಮತ್ತು ದುಡಿಯುವವರಿಗೆ ವಾಕ್ ಸ್ವಾತಂತ್ರ, ಪತ್ರಿಕಾ ಸ್ವಾತಂತ್ರ್ಯಸಭಾ ಸ್ವಾತಂತ್ರ್ಯಗಳನ್ನು ನೀಡಿತು. ಪ್ರತಿಕ್ರಾಂತಿಕಾರರಿಗೆ, ಸಮಾಜ ದ್ರೋಹಿಗಳಿಗೆ ಮತ್ತು ಬಂಡವಾಳಗಾರರಿಗೆ ಇವರು ಬಂಡವಾಳಶಾಹಿ ಪದ್ಧತಿಯನ್ನು ಪುನರ್ ಸ್ಥಾಪಿಸಲು ಪ್ರಯತ್ನಿಸುವವರೆಂದು ತಿಳಿದು ಈ ಸ್ವಾತಂತ್ರ್ಯಗಳನ್ನು ಅವರಿಗೆ ನಿರಾಕರಿಸಲಾಯಿತು.

ಶೋಷಕ ವರ್ಗದ ದಾಳಿಯನ್ನು ಎದುರಿಸುವ ಸೀಮಿತ ದೃಷ್ಟಿಯಿಂದ ಈ ಕ್ರಮಗಳನ್ನು ಕೈಗೊಂಡಿದ್ದಾಗಿರಲಿಲ್ಲ; ಜನರ ಜೀವನವನ್ನು ಉತ್ತಮ ಪಡಿಸುವ ಸಲುವಾಗಿ ಈ ಕ್ರಮಗಳನ್ನು ಕೈಗೊಂಡಿದ್ದಾಗಿತ್ತು.

ಕಾರ್ಮಿಕವರ್ಗ ಸೋವಿಯತ್ ಸರ್ಕಾರ ತನ್ನದೇ ಸರ್ಕಾರಎಂದು ಭಾವಿಸಿತು. ಕಮ್ಯೂನಿಸ್ಟ್ ಪಕ್ಷದ ಧ್ಯೇಯ ಧೋರಣೆಗಳಲ್ಲಿ ವಿಶ್ವಾಸಗಳನ್ನಿಟ್ಟಿತು. ಸರ್ಕಾರ ಮಾಡಿದ ಘೋಷಣೆಗಳನ್ನು ಶಾಂತಿಯ ಘೋಷಣೆ, ಭೂ ಸಂಭಂದದ ಘೋಷಣೆ ರಾಷ್ಟ್ರೀಕರಣದ ಘೋಷಣೆ, ಇವುಗಳು ಜಾರಿಯಾಗುತ್ತಾ ಬಂದಂತೆ ಜನತೆಯಲ್ಲಿ ಸೋವಿಯತ್ ಸರ್ಕಾರದ ಮೇಲೆ ದೃಢ ವಿಶ್ವಾಸ ಮೂಡಿತು.

ಕಾರ್ಮಿಕರು ಅಧಿಕಾರಕ್ಕೆ ಬಂದರೆ, ಕಾರ್ಮಿಕರು ಮತ್ತು ದೇಶ ಹಾಳಾಗುತ್ತದೆ. ಯಾರು ನಮ್ಮನ್ನು ಆಳುತ್ತಾರೆ? ಯಂತ್ರಗಳೋ ಬಡಗಿಯೋ, ಕಸಗುಡಿಸುವವರೋ ಎಂಬ ಅಪಪ್ರಚಾರ ಮತ್ತು ಪ್ರಶ್ನೆಗಳು ವ್ಯಾಪಕವಾಗಿ ಹರಡುತ್ತಿದ್ದವು ಸೋವಿಯತ್‌ಗಳು ಈಪ್ರಶ್ನೆಗಳಿಗೆ ಮತ್ತು ಅಪಪ್ರಚಾರಗಳಿಗೆ ಉತ್ತರ ಕೊಟ್ಟಿದ್ದಾಗಿದೆ.

ಕ್ರಾಂತಿಯ ನಂತರ ಆಡಳಿತ ಪ್ರವೀಣರು ದೊರೆತರು. ಕಾರ್ಮಿಕ ಸಂಘಗಳೇ ಇಂತಹ ಪ್ರವೀಣರನ್ನು ಒದಗಿಸುವ ಆಕರಗಳಾದವು ಆಡಳಿತ ನಿರ್ವಹಿಸುವ ಜ್ಞಾನವನ್ನು ಶ್ರಮದಿಂದ ಕಲಿತರು.

ರಷ್ಯದ ಸರ್ವೋಚ್ಚ ಸೋವಿಯತ್‌ನಲ್ಲಿ 1500 (ಅಲ್ಲಿಯ ಲೋಕಸಭೆ) ಸದಸ್ಯರಲ್ಲಿ 766 ಕಾರ್ಮಿಕರು ಇರುವುದೇಇದಕ್ಕೆ ಸಾಕ್ಷಿ. *

## ೫೦ ವರ್ಷ ತುಂಬಿದ

# ಭಾರತದ ವಿದ್ಯಾರ್ಥಿ ಚಳುವಳಿ

**ಎಂ. ಎ. ಬೇಬಿ**

ದಿನಾಂಕ 4-7-86ರಂದು ಮೈಸೂರಿನಲ್ಲಿ ರಾಜ್ಯ ಮಟ್ಟದ ಎಸ್.ಎಫ್.ಐ. ಅಧ್ಯಯನ ತರಬೇತಿ ಶಿಬಿರದಲ್ಲಿ ಭಾರತದ ವಿದ್ಯಾರ್ಥಿ ಚಳುವಳಿಯ ಇತಿಹಾಸದ ಕುರಿತು ರಾಜ್ಯಸಭಾ ಸದಸ್ಯ ಹಾಗೂ ಡಿ. ವೈ. ಎಫ್. ಐ. ಸಹ ಕಾರ್ಯದರ್ಶಿಯಾದ ಕಾ|| ಎಂ. ಎ. ಬೇಬಿಯವರು (ಎಸ್.ಎಫ್. ಐ. ಯ ಹಿಂದಿನ ಅಧ್ಯಕ್ಷರು) ನೀಡಿದ ಉಪನ್ಯಾಸವನ್ನು ಲೇಖನ ರೂಪದಲ್ಲಿ ಐಕ್ಯರಂಗ ಓದುಗರಿಗಾಗಿ ಇಲ್ಲಿ ಪ್ರಕಟಿಸಲಾಗಿದೆ.

---

1936ರಂದು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯು ಸ್ಥಾಪನೆಯಾಗಿ ಐವತ್ತು ವರ್ಷಗಳು ಸಂದಿವೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸುದೀರ್ಘ ಇತಿಹಾಸದ ಹಿನ್ನೆಲೆಯಲ್ಲಿ ಬೆಳೆದು ಬಂದ ವಿದ್ಯಾರ್ಥಿ ಚಳುವಳಿಯು ರೂಪುಗೊಂಡ ಚಾರಿತ್ರಿಕ ಹಿನ್ನೆಲೆ, ನಂತರದ ಬೆಳವಣಿಗೆ ಹಾಗೂ ಹೋರಾಟದ ಉನ್ನತ ಪರಂಪರೆಯನ್ನು ನಾವು ನೆನೆಯಬೇಕು.

ಇಪ್ಪತ್ತರ ದಶಕದ ಆರಂಭದ ಭಾರತದಲ್ಲಿ ವಿದ್ಯಾರ್ಥಿ ಚಳುವಳಿ ರೂಪುಗೊಳ್ಳುತ್ತಿದ್ದ ಕಾಲ, ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೇತೃತ್ವದಲ್ಲಿ 'ಅಸಹಕಾರ ಚಳುವಳಿ'ಯು ಪ್ರಾರಂಭವಾಯಿತು. 1920ರಲ್ಲಿ ಕಲ್ಕತ್ತಾದಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು 'ಸಂಘಟಿತ ವಿದ್ಯಾರ್ಥಿ ಚಳುವಳಿ'ಯನ್ನು ರೂಪಿಸುವ ಬಗ್ಗೆ ನಿರ್ಣಯ ತೆಗೆದುಕೊಂಡಿತು. ಅದೇ ವರ್ಷ ನಾಗಪುರದಲ್ಲಿ ಕಾಲೇಜ್ ವಿದ್ಯಾರ್ಥಿಗಳ ಅಖಿಲ ಭಾರತ ಅಧಿವೇಶನವನ್ನು ಸಂಘಟಿಸಲಾಯಿತು. ಸ್ವಾತಂತ್ರ್ಯ ಚಳುವಳಿಯ ಪ್ರಮುಖ ನಾಯಕರಲ್ಲೊಬ್ಬರಾದ ಲಾಲಾಲಜಪತರಾಯ್ ಅವರು ಈ ಅಧಿವೇಶನವನ್ನು ಉದ್ಘಾಟಿಸುತ್ತಾ "ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದನ್ನು ವಿರೋಧಿಸುವ ಮತ್ತು ಅಭ್ಯಾಸ ಮಾಡುವುದು ಮಾತ್ರವೇ ವಿದ್ಯಾರ್ಥಿಗಳ ಕರ್ತವ್ಯವೆಂದು ವಾದಿಸುತ್ತಿದ್ದ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಕುತಂತ್ರವನ್ನು ಬಯಲಿಗೆಳೆದು ಖಂಡಿಸಿದರು.

ಪ್ರಥಮವಾಗಿ ಸಮಾವೇಶಗೊಂಡ ಈ ಕಾಲೇಜ್ ವಿದ್ಯಾರ್ಥಿಗಳ ಅಖಿಲ ಭಾರತ ಅಧಿವೇಶನವು 'ಹಿಂದ್ ವಿದ್ಯಾರ್ಥಿ ಸಭಾ' ಎಂಬ ಹೆಸರಿನಲ್ಲಿ ಸಂಘಟನೆ ಆರಂಭಿಸಲು ತೀರ್ಮಾನಿಸಿತು. 1920-23ರ ಅವಧಿಯಲ್ಲಿ ದೇಶದ ನಾಲ್ಕು ಕಡೆಗಳಲ್ಲಿ ವಾರ್ಷಿಕ ಕಾಲೇಜ್ ವಿದ್ಯಾರ್ಥಿಗಳ ಪ್ರತ್ಯೇಕ ಸಮಾವೇಶಗಳು ನಡೆದವು.

ಎ.ಐ.ಸಿ.ಸಿ.ಯ ಕಲ್ಕತ್ತಾ ಅಧಿವೇಶನ ಮತ್ತು ನಾಗಪುರದ ವಿದ್ಯಾರ್ಥಿಗಳ ಅಧಿವೇಶನದ ಕರೆಯ ಬಳಿಕ ವಿದ್ಯಾರ್ಥಿಗಳ ಸಾಮೂಹಿಕ ಚಳವಳಿಗಳು ಬೆಳೆದು ಬಂದವು. 1921ರಲ್ಲಿ ಕೇರಳದ ತಿರುವನಂತಪುರದಲ್ಲಿ ವಿದ್ಯಾರ್ಥಿಗಳ ಚಳವಳಿ 1921 ಡಿಸೆಂಬರ್‌ನಲ್ಲಿ ಅಹಮದಬಾದ್‌ನಲ್ಲಿ ನಡೆದ ವಿದ್ಯಾರ್ಥಿ ಸಮ್ಮೇಳನದಲ್ಲಿ 3,000 ವಿದ್ಯಾರ್ಥಿಗಳು ಭಾಗವಹಿಸುವಿಕೆ ಅಂದಿನ ಚಳವಳಿಗೆ ನೀಡಿದ ಸ್ಪಂದನವಾಗಿತ್ತು. ಖಾದಿ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ಅಸ್ಪೃಶ್ಯತೆಯ ವಿರೋಧ, ಸಾಕ್ಷರತಾ ಚಳುವಳಿ, ರಸ್ತೆ ನಿರ್ಮಾಣ ರಾತ್ರಿ ಶಾಲೆಗಳಂತಹ ಹಲವಾರು 'ರಚನಾತ್ಮಕ ಕಾರ್ಯಗಳನ್ನು' ಗಾಂಧೀಜಿಯವರ ಧೋರಣೆಯ ಪ್ರಭಾವದಲ್ಲಿ ರೂಪಿಸಲಾಯಿತು. ಆದರೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಸುಲಿಗೆ, ದಬ್ಬಾಳಿಕೆ ತೀವ್ರವಾಗಿದ್ದ ಅಂದಿನ ಪರಿಸ್ಥಿತಿಯಲ್ಲಿ ಕೇವಲ ರಚನಾತ್ಮಕ ಕಾರ್ಯಗಳು ವಿದ್ಯಾರ್ಥಿಗಳನ್ನು ಸಾಮ್ರಾಜ್ಯಶಾಹಿ ವಿರುದ್ಧ ಧೀರ ಹೋರಾಟ ನಡೆಸದೇ ಸೀಮಿತ ಚಳುವಳಿಗಳಲ್ಲಿ ತೊಡಗುವಂತೆ ಮಾಡುವುದಲ್ಲದೇ ಬಲಿಷ್ಠ ಸಾಮೂಹಿಕ ಚಳವಳಿಗಳಿಂದ ಪ್ರತ್ಯೇಕಗೊಳಿಸುವ ತಂತ್ರವಾಗಿತ್ತು.

ಎ.ಐ.ಸಿ.ಸಿ.ಯ- ನಾಗಪುರ ಅಧಿವೇಶನದಲ್ಲಿಯೆ ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ ಬಗ್ಗೆ ಕಾಂಗ್ರೆಸ್ ಇನ್ನೂ ಹಿಂದೆಮುಂದೆ ನೋಡುತ್ತಿದ್ದಾಗಲೇ, ಸಂಪೂರ್ಣ ಸ್ವಾತಂತ್ರ್ಯ ದಘೋಷಣೆಯನ್ನು ಇಡಲಾಯಿತು. ಕೇವಲ 11 ಮತಗಳಿಂದ ಈ ನಿರ್ಣಯ ತಿರಸ್ಕೃತವಾಯಿತು. ಭಾರತದ ವಿದ್ಯಾರ್ಥಿ ಚಳವಳಿಯ ಇನ್ನೊಂದು ಮುಖ್ಯ ಹಂತವೆಂದರೆ 1928ರ ಸೈಮನ್ ಕಮೀಷನ್ ವಿರೋಧಿ ಹೋರಾಟ. ಕಾಂಗ್ರೆಸ್‌ನ ವಿರೋಧವು ಆ ಕಮಿಷನ್‌ನಲ್ಲಿ ಭಾರತೀಯರಿಗೆ ಪ್ರಾತಿನಿಧ್ಯವಿರಬೇಕೆಂಬ ಅಂಶಕ್ಕೆ ಮಾತ್ರ ಸೀಮಿತಗೊಂಡಿತ್ತು.

ಆದರೆ ಭಾರತದ ಭವಿಷ್ಯವನ್ನು ನಿರ್ಧರಿಸುವುದು ಸೈಮನ್ ಕಮಿಷನ್ ಅಲ್ಲವೆಂದು ತಮ್ಮ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿ ವಿದ್ಯಾರ್ಥಿಗಳು ತರಗತಿಗಳ ಬಹಿಷ್ಕಾರ, ಪ್ರತಿಭಟನಾ ಪ್ರದರ್ಶನಗಳು ಮತ್ತು ಸಭೆಗಳನ್ನು ನಡೆಸಿದರು. ಒಂದೆಡೆ ಕಾಂಗ್ರೆಸ್ ಬ್ರಿಟಿಷರೊಂದಿಗೆ ಅಧಿಕಾರಕ್ಕಾಗಿ ಶಾಮಿಲಾಗಲು ಬಯಸುತ್ತಿದ್ದರೆ, ವಿದ್ಯಾರ್ಥಿ ಚಳುವಳಿಯು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ದಿಟ್ಟಹೋರಾಟದಲ್ಲಿ ತೊಡಗಿತ್ತು.

1930ರ ದಶಕದಲ್ಲಿ ಜಾಗತಿಕ ರಂಗದಲ್ಲಿ ಹಲವಾರು ಮಹತ್ವಪೂರ್ಣ ಬೆಳವಣಿಗೆಗಳು ಉಂಟಾದ ಹಿನ್ನೆಲೆಯಲ್ಲಿ ಈ ಅವಧಿಯಲ್ಲಿ ಜಾಗತಿಕ ಬಂಡವಾಳಶಾಹಿಯು ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನೆದುರಿಸುತ್ತಿತ್ತು. ಇದರ ಪರಿಣಾಮವಾಗಿ ಫ್ಯಾಸಿಸ್ಟ್‌ವಾದ-ನಾಜೀವಾದಗಳ ಉದಯಕ್ಕೆ ಕಾರಣವಾಯಿತು. ಇಟಲಿಯ ಮುಸಲೋನಿ, ಜರ್ಮನಿಯ ಹಿಟ್ಲರ್ ಅವರುಗಳು ಜಾಗತಿಕ ರಂಗ ವ್ಯತಿರಿಕ್ತವಾಗಿ ಜಗತ್ತಿನಲ್ಲೇ ಪ್ರಪ್ರಥಮವಾಗಿ ಉದಯಿಸಿದ ಸಮಾಜವಾದಿ ಸೋವಿಯತ್ ಯೂನಿಯನ್ನಿನ ಸಾಧನೆಗಳು, ಪಂಚವಾರ್ಷಿಕ ಯೋಜನೆಗಳು, ಶಿಕ್ಷಣರಂಗದ ಯಶಸ್ಸು ಇಡೀ ವಿಶ್ವದ ಗಮನ ಸೆಳೆದಿದ್ದವು.

ಈ ಹಿನ್ನೆಲೆಯಲ್ಲಿ, ಪ್ರಗತಿಪರ ವಿಚಾರಧಾರೆಯ ವಿದ್ಯಾರ್ಥಿಗಳಿಂದ 1936ರಲ್ಲಿ ಲಕ್ನೋದಲ್ಲಿ ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ ಸ್ಥಾಪನೆಗೊಂಡಿತು. ಜವಹರಲಾಲ್‌ನೆಹರು ಸಮ್ಮೇಳನವನ್ನು ಉದ್ಘಾಟಿಸಿದರು. ಮಹಮ್ಮದ್ ಆಲಿ ಜಿನ್ನಾ ಅಧ್ಯಕ್ಷತೆ ವಹಿಸಿದ್ದರು. 1936 ಡಿಸೆಂಬರ್‌ನಲ್ಲಿ ಏ ಐ.ಎಸ್.ಎಫ್.ನ 2ನೇ ಸಮಾವೇಶದಲ್ಲಿ ಸಂವಿಧಾನವನ್ನು ಅಂಗೀಕರಿಸಲಾಯಿತು. ಇದೇ ವರ್ಷದಲ್ಲಿ ಹಲವಾರು ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಳಗಳು ಪ್ರಾದೇಶಿಕ ಸರ್ಕಾರಗಳು ಅಧಿಕಾರಕ್ಕೆ ಬಂದವು. ಬ್ರಿಟಿಷರೊಂದಿಗೆ ಅಧಿಕಾರ ಹಂಚಿಕೊಂಡ ಕಾಂಗ್ರೆಸ್ ನಾಯಕರು ವಿದ್ಯಾರ್ಥಿಗಳಿಗೆ ಚಳವಳಿಯ ಹಾದಿಯನ್ನು ಕೈಬಿಡುವಂತೆ ಕರೆನೀಡಿದರು. ವಿದ್ಯಾರ್ಥಿ ಮುಷ್ಕರಗಳನ್ನು ವಿರೋಧಿಸಿದರು.

1937 ನವೆಂಬರ್ 30 ರಂದು ಪ್ರಥಮವಾಗಿ ಅಖಿಲಭಾರತವಿದ್ಯಾರ್ಥಿ ಫೆಡರೇಷನ್ ನೇತೃತ್ವದಲ್ಲಿಅಖಿಲಭಾರತ ಬೇಡಿಕೆ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸಲಾಯಿತು. 1939 ಜನವರಿಯಲ್ಲಿ ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ನಿನ ಅಖಿಲ ಭಾರತ ಅಧಿವೇಶನ ದೆಹಲಿಯಲ್ಲಿ ಜರುಗಿದಾಗ ಉಗ್ರ ಹೋರಾಟಗಳು ಇರಬೇಕೆ-ಬೇಡವೇ ಎಂಬ ಬಗ್ಗೆ ಗಂಭೀರಚರ್ಚೆ ನಡೆದು ಅನೈಕ್ಯತೆಯ ಸೂಚನೆ ಕಂಡುಬಂದಿತು. ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯಲ್ಲಿ ಕಾಂಗ್ರೆಸ್ (ಮುಖ್ಯವಾಗಿ ಸುಭಾಷ್ ಚಂದ್ರ ಬೋಸ್ ನೇತೃತ್ವದ ಎಡ ರಾಷ್ಟ್ರೀಯವಾದಿಗಳು) ಸಿ.ಎಸ್.ಪಿ. ಮತ್ತು ಕಮ್ಯೂನಿಸ್ಟ್ ಬೆಂಬಲಿಗರೆಲ್ಲರೂ ಕೆಲಸ ಮಾಡುತ್ತಿದ್ದರು. ರಾಜಕೀಯ ಭಿನ್ನ ಮತವಿದ್ದರೂ ವಿಶಾಲ ಸಾಮೂಹಿಕ ಸಂಘಟನೆಯ ಸ್ವರೂಪ ಹೊಂದಿದ್ದ ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ ಸಂಘಟನೆಯನ್ನು ಕೆಲವರು ಕಾಂಗ್ರೆಸ್ಸಿನ ಬಾಲಬಡುಕ ಸಂಘಟನೆಯಾಗಿ ಪರಿವರ್ತಿಸಲು ಪ್ರಯತ್ನಿಸಿ ಅನೈಕ್ಯತೆಗೆ ಎಡೆಮಾಡಿ ವಿದ್ಯಾರ್ಥಿ ಚಳವಳಿಯ ಮುನ್ನಡೆಗೆ ದ್ರೋಹ ಬಗೆದರು.

1940ರಲ್ಲಿ ಜರ್ಮನಿಯ ಫ್ಯಾಸಿಸ್ಟ್ ಹಿಟ್ಲರನ ಸೈನ್ಯ ಸಮಾಜವಾದಿ ಸೋವಿಯತ್ತಿನ ಒಕ್ಕೂಟದ ಮೇಲೆ ಆಕ್ರಮಣ ಪ್ರಾರಂಭಿಸಿತು. ಅಮೇರಿಕಾ, ಬ್ರಿಟನ್ ಫ್ರಾನ್ಸ್, ಸೋವಿಯತ್‌ನ ಒಕ್ಕೂಟಗಳು ಸಂಯುಕ್ತ ರಂಗ ರಚಿಸಿಕೊಂಡು ಫ್ಯಾಸಿಸಂ ಪತನಕ್ಕಾಗಿ ಜಗತ್ತಿನಎಲ್ಲಾ ಸ್ವಾತಂತ್ರ್ಯ ಪ್ರೇಮಿಗಳಿಗೂ ಕರೆ ನೀಡಿದರು.

1942ರಿಂದ ಭಾರತದಲ್ಲಿ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ" ಚಳವಳಿ ರಂಭವಾಯಿತು, ಫ್ಯಾಸಿಸ್ಟ್ ವಿರೋಧಿ ರಂಗದ ಪ್ರಾಮುಖ್ಯತೆಯನ್ನು ಅರಿಯದೇ ಕಾಂಗ್ರೆಸ್‌ನ ಪಕ್ಷ ಸಮಯಸಾಧಕ ನಿಲುವು ತಳೆಯಿತು. ವಿದ್ಯಾರ್ಥಿ ಚಳುವಳಿಯಲ್ಲಿ ಸಹ ಭಿನ್ನಾಭಿಪ್ರಾಯಗಳು ತೀವ್ರಗೊಂಡು ಅಖಿಲಭಾರತ ವಿದ್ಯಾರ್ಥಿ ಫೆಡರೇಷನ್ನಿನಲ್ಲಿ ಒಡಕುಂಟಾಯಿತು. ವಿದ್ಯಾರ್ಥಿ ಕಾಂಗ್ರೆಸ್ಸೆಂಬ ಹೊಸ ಸಂಸ್ಥೆಯ ರಚನೆಯಾಯಿತು. 1942ರ ಅವಧಿಯಲ್ಲಿ ಕಲ್ಕತ್ತಾ ಬಾಂಬೆ, ಪಾಟ್ನಾ, ಅಲಹಾಬಾದ್ ಮುಂತಾದೆಡೆ ಎ.ಐ.ಎಸ್.ಎಫ್.ನ ಮೇಲೆ ಪೋಲೀಸ್ ಹಲ್ಲೆಗಳು, ಗೋಲಿಬಾರ್‌ಗಳು ನಡೆದವು.

1945ರ ನಂತರ ದೇಶಾದ್ಯಂತ ಕಾಣಿಸಿಕೊಂಡ ಸಾಮೂಹಿಕ ಬಂಡಾಯಗಳಿಗೆ ತೆಲಂಗಾಣ ರೈತರ ಸಶಸ್ತ್ರ ಹೋರಾಟ ರಾಯಲ್ ಇಂಡಿಯನ್ ನೇವಿ ನೌಕದಳದ ಬಂಡಾಯ ಮುಂತಾದ ಹೋರಾಟಗಳಿಗೆ ಎ.ಐ.ಎಸ್. ಎಫ್ ವಿದ್ಯಾರ್ಥಿಗಳು ಸಕ್ರಿಯ ಬೆಂಬಲ ನೀಡಿದರು.

1947 ಆ. 15ರಂದು ಬ್ರಿಟಿಷರಿಂದ ಭಾರತ ರಾಜಕೀಯ ಸ್ವಾತಂತ್ರ್ಯ ಪಡೆಯಿತು. ಸ್ವಾತಂತ್ರ್ಯದ ಸಂಭ್ರಮಎಲ್ಲೆಡೆ ಕಂಡುಬಂದಿತು. ಆದರೆ ನಂತರದಲ್ಲಿ ಇದು ಜನತೆಯ ವಿಮೋಚನೆಯ ಮೊದಲ ಘಟ್ಟ ಮಾತ್ರವೆಂಬ ಅರಿವುಂಟಾಯಿತು. ಸಾಮ್ರಾಜ್ಯಶಾಹಿಯ ನೇರ ಸುಲಿಗೆಯನ್ನು ಹೊಡೆದೋಡಿಸುವಲ್ಲಿ ಎ.ಐ.ಎಸ್.ಎಫ್.ನ ಪಾತ್ರ ಮಹತ್ವಪೂರ್ಣವಾಗಿದೆ.

ಸ್ವಾತಂತ್ರ್ಯ ಬಂದೊಡನೆಯೇ 1948-51ರ ಅವಧಿಯಲ್ಲಿ ಭಾರತದ ಆಳುವ ವರ್ಗ ವಿದ್ಯಾರ್ಥಿ ಚಳವಳಿಯ ಮೇಲೆ ಕ್ರೂರ ದಬ್ಬಾಳಿಕೆ ನಡೆಸಿದೆ. ಉಗ್ರ ಹೋರಾಟದ ಹಾದಿಯಲ್ಲಿದ್ದ ಅನೇಕ ವಿದ್ಯಾರ್ಥಿ ನಾಯಕರುಭೂಗತ ಜೀವನ ನಡೆಸಬೇಕಾಯಿತು.

1952ರಲ್ಲಿ ಸಾರ್ವತ್ರಿಕ ಚುನಾವಣೆಗಳು ಸಂವಿಧಾನದ ಅಂಗೀಕಾರವಾಗಿ ವಯಸ್ಕ ಮತದಾನದ ಆಧಾರದಲ್ಲಿ ನಡೆದವು. ಪ್ರಥಮ ಗಣರಾಜ್ಯ ಪಂಚವಾರ್ಷಿಕ ಯೋಜನೆ ಆರಂಭವಾಯಿತು. ವಿದ್ಯಾರ್ಥಿ ಚಳವಳಿಯ ನಾಯಕತ್ವದಲ್ಲಿ ಹಲವಾರು ರೀತಿಯ ಗೊಂದಲಗಳು ತಲೆದೋರಿ ಸೋವಿಯತ್ ಮಾದರಿಯ ಯೋಜನೆಗಳೆಂಬ ಭ್ರಮೆ ಹಲವರಲ್ಲಿ ಏರ್ಪಟ್ಟಿತು. ಸಮಾಜವಾದೀ ವ್ಯವಸ್ಥೆ-ಬಂಡವಾಳಶಾಹಿ ವ್ಯವಸ್ಥೆಗಳ ಉತ್ತಮ ಅಂಶಗಳನ್ನೂ ಸೇರಿಸಿ ಮಿಶ್ರಆರ್ಥಿಕ ವ್ಯವಸ್ಥೆಯನ್ನು ರೂಪಿಸಿರುವುದಾಗಿ ನೆಹರು ಪ್ರತಿಪಾದಿಸಿದರು. ಆದರೆ ಈ ಆರ್ಥಿಕ ನೀತಿಯು ಮೂಲತಃ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಗೆ ಸಹಾಯಕವಾಗಿತ್ತು. ಮಿಶ್ರ ಆರ್ಥಿಕ ವ್ಯವಸ್ಥೆ ಬಗ್ಗೆ ವ್ಯಾಪಕ ಪ್ರಚಾರ ನಡೆದರೂ ಕಾಂಗ್ರೆಸ್ಸಿನ ದುರಾಡಳಿತವನ್ನು ಬಯಲಿಗೆಳೆಯುವ ಎ.ಐ.ಎಸ್ ಎಫ್ ಹೋರಾಟ ಮುಂದುವರಿಯಿತು. ಏ.ಐ.ಎಸ್.ಎಫ್‌ನಲ್ಲಿಒಂದು ವಿಭಾಗವು ಹೋರಾಟದ ಹಾದಿಯನ್ನು ತೊರೆದು ಕಾಂಗ್ರೆಸ್ಸಿನ ಹಿಂದೆ ನಡೆಯಿತು. ರಾಷ್ಟ್ರೀಯ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಲು ಕರೆನೀಡಿ ಭ್ರಮಾತ್ಮಕ ಹಾದಿ ತುಳಿದು ಕ್ರಮೇಣ ನಿಷ್ಕ್ರಿಯವಾಗುತ್ತಾ ಬಂದಿತು.

ಬ್ರಿಟೀಷರ ವಿರುದ್ಧ ಹೋರಾಡಲು ಸಕ್ರಿಯವಾಗಿ ರಾಜಕೀಯದಲ್ಲಿ ಭಾಗವಹಿಸಲು ಕರೆನೀಡಿದ್ದ ಜವಹರಲಾಲ ನೆಹರೂರವರು ತಮ್ಮ ಬಂಡವಾಳಶಾಹೀ ದ್ವಿಮುಖ ಧೋರಣೆಯನ್ನು ಬಯಲುಮಾಡುವಂತೆ ರಾಜಕೀಯದಿಂದ ದೂರವಿರಬೇಕೆಂದು ವಿದ್ಯಾರ್ಥಿಗಳಿಗೆ ಬೋಧಿಸತೊಡಗಿದರು. ಅವರ ವಾಕ್ಚಾತುರ್ಯತೆ, ವ್ಯಾಪಕ

(6ನೇ ಪುಟ ನೋಡಿ)

# ಹಿರೋಶಿಮಾ ದಿನಾಚರಣೆ

ಉಡುಪಿ: ಆಗಸ್ಟ್ 6ರಂದು ಉಡುಪಿಯಲ್ಲಿ ಹಿರೋಶಿಮಾ ದಿನಾಚರಣೆ ನಡೆಯಿತು. ರಾಜ್ಯ ಸರ್ಕಾರಿ ನೌಕರರ ಸಭಾಭವನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಿ.ಐ.ಟಿ.ಯು.ನ ಮುಂದಾಳು ಕಾ. ಡೇವಿಡ್‌ಕರ್ಕಡರವರು ಮಾತನಾಡಿ ನಲವತ್ತು ವರ್ಷಗಳ ಹಿಂದೆ ಸಾಮ್ರಾಜ್ಯಶಾಹಿಗಳು ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಮಾಡಿದ ಘೋರ ಧಾಳಿಯನ್ನು ವಿವರಿಸಿದರು. ಇಂದಿಗೂ ಸಾಮ್ರಾಜ್ಯಶಾಹಿಗಳು ಜಗತ್ತಿನಲ್ಲಿ ಅಣುಯುದ್ಧದ ತಯಾರಿ ನಡೆಸುತ್ತಿರುವುದನ್ನು ಪ್ರಸ್ತಾಪಿಸಿದ ಅವರು ಕಾರ್ಮಿಕರು ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಹೋರಾಟ ನಡೆಸುವುದರ ಜೊತೆಗೆ ಮಾನವಕುಲದ ಉಳಿವಿಗಾಗಿ ಕೂಡ ಹೋರಾಟ ನಡೆಸಬೇಕಾಗಿದೆಯೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಕಾ.ಪಿ. ವಿಶ್ವನಾಥ ರೈ ಅವರು ಕಾರ್ಮಿಕ ವರ್ಗದ ಮಿತ್ರ ರಾಷ್ಟ್ರವಾದ ಸೋವಿಯತ್ ಯೂನಿಯನ್ ಅನ್ನು ನಾಶಪಡಿಸಬೇಕೆಂದು ಅಮೆರಿಕನ್ ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಕುತಂತ್ರಗಳನ್ನು ವಿವರಿಸಿದರು.

ಸಭೆಯಲ್ಲಿ ಹಿರೋಶಿಮಾ, ನಾಗಸಾಕಿಯಲ್ಲಿ ಬಾಂಬ್ ಧಾಳಿಯಿಂದ ಸತ್ತವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಗೋಣಿಕೊಪ್ಪ : ಕೊಡಗು ಜಿಲ್ಲೆಯ ಗೋಣಿಕೊಪ್ಪದಲ್ಲಿ ಆಗಸ್ಟ್ 6ರಂದು ಹಿರೋಶಿಮಾ ದಿನವನ್ನು ಆಚರಿಸಿರುವುದಾಗಿ ವರದಿಯಾಗಿದೆ. ಈ ಸಂಬಂಧವಾಗಿ ಮೆರವಣಿಗೆ ಮತ್ತು ಬಹಿರಂಗ ಸಭೆಗಳನ್ನು ನಡೆಸಲಾಗಿದೆ. ಬಹಿರಂಗ ಸಭೆಯಲ್ಲಿ ಕಾ|| ಪಿ.ಕೆ.ಜಿ. ನಂಬಿಯಾರ್, ಸಿ.ಎ. ಸುಕುಮಾರ್, ಫಿಲಿಪ್ಸ್ ಮುಂತಾದವರು ಮಾತನಾಡಿ ಅಮೇರಿಕದ ಸಾಮ್ರಾಜ್ಯಶಾಹಿಗಳು ಮಾನವ ಜನಾಂಗಕ್ಕೆ ಒಡ್ಡಿರುವ ಯುದ್ಧದ ಭೀತಿಯನ್ನು ವಿವರಿಸಿದರೆಂದು ವರದಿಯಲ್ಲಿ ತಿಳಿಸಲಾಗಿದೆ.

## ರೈತಸಂಘದ ಅಧ್ಯಯನ ಶಿಬಿರ

ಜುಲೈ 20, 21, 22 ರಂದ ಶಿರಗುಪ್ಪಾದ ಕೆಂಚನಗುಡ್ಡದಲ್ಲಿ ಪ್ರಾಂತ ರೈತ ಸಂಘದ ಜಿಲ್ಲೆಯ ಕಾರ್ಯಕರ್ತರಿಗೆ ಅಧ್ಯಯನ ಶಿಬಿರವನ್ನು ನಡೆಸಲಾಯ್ತು. ಅಧ್ಯಯನ ಶಿಬಿರದಲ್ಲಿ 25 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಮೊದಲ ದಿನ ಸಂಘಟನೆ, ಸಂಘಟನೆಯ ತಂತ್ರಗಳ ಬಗ್ಗೆ, ಎರಡನೆಯ ದಿನ ಎ.ಐ.ಕೆ.ಎಸ್.ನ ವಿಶಾಲ ತಳಹದಿ ಮತ್ತು ಕೃಷಿ ಕ್ರಾಂತಿಯ ಮಹತ್ವದ ಬಗ್ಗೆ.

ಮೂರನೆಯ ದಿನ, ಎಡರಂಗ ಸರಕಾರದ ಸಾಧನೆ ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ರೈತರ ಪಾತ್ರಗಳ ಬಗ್ಗೆ, ಶಿಬಿರವನ್ನು ನಡೆಸಲಾಯ್ತು. ಮೂರುದಿನದ ಶಿಬಿರದಲ್ಲಿ ಒಂದು ದಿನ ಕಾ.ಪಿ.ಆರ್. ವೆಂಕಟೇಶ, ಕಾಂ. ಯು. ಬಸವರಾಜ, 2ನೇ ದಿನ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾ. ಪಿ. ರಾಮಚಂದ್ರರಾವ್ ನಡೆಸಿಕೊಟ್ಟರು. ಕೊನೆಯಲ್ಲಿ ಕಾಂ. ಮೇಟಿಕೊಟ್ರಪ್ಪನವರು ಅಭಿನಂಧಿಸಿದರು.

### ಬಹಿರಂಗ ಸಭೆ

ಜೂನ್ 22 ರಂದು ಬಹಿರಂಗಸಭೆ ನಡೆಯಿತು. ಸಭೆಯನ್ನು ಕೆಂಚನಗುಡ್ಡ ಗ್ರಾಮ ಘಟಕವು ಏರ್ಪಡಿಸಿತ್ತು. ಸಭೆಯನ್ನು ಉದ್ದೇಶಿಸಿ ಕಾಂ. ವೀರಸಂಗಯ್ಯ ಮೇಟಿಕೊಟ್ರಪ್ಪ, ಯು. ಬಸವರಾಜ್, ಕಾಂ. ವೆಂಕಟೇಶ್, ಹಾಗೂ ಕಾ. ಪಿ, ರಾಮಚಂದ್ರರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ನಂತರ ಗ್ರಾಮ ಘಟಕದ ಕಾರ್ಯದರ್ಶಿ ಕಾಂ. ರುದ್ರಗೌಡ ವಂದಿಸಿದರು.

## ರಾಷ್ಟ್ರೀಯ ಭಾವೈಕ್ಯತಾ ದಿನಾಚರಣೆ

ಹತ್ತು ಕೇಂದ್ರೀಯ ಕಾರ್ಮಿಕ ಸಂಘಗಳು ಕರೆ ಕೊಟ್ಟಿದ್ದ ರಾಷ್ಟ್ರೀಯ ಭಾವೈಕ್ಯತಾ ದಿನಾಚರಣೆ ಅಂಗವಾಗಿ ಉಡುಪಿಯಲ್ಲಿ ಸಭೆ ನಡೆಸಲಾಯಿತು. ಮಿಲಾಗ್ರಿಸ್ ಕಾಲೇಜಿನ ಪ್ರಾಧ್ಯಾಪಕರಾದ ಎಸ್. ಆರ್. ವಿಜಯಶಂಕರ್‌ರವರು ಮಾತನಾಡಿ ವಿಭಜಕ ಶಕ್ತಿಗಳನ್ನು ಮೆಟ್ಟಿ ಇಂದು ನಾವು ಜನತೆಯ ಭಾವೈಕ್ಯತೆಯನ್ನು ಉಳಿಸಬೇಕಾಗಿದೆ ಎಂದು ಕರೆ ನೀಡಿದರು. ಸಭೆಯ ಮುಖ್ಯ ಅತಿಥಿಯಾಗಿದ್ದ 'ತರಂಗ' ಸಂಪಾದಕರಾದ ಸಂತೋಷ್‌ಕುಮಾರ್ ಗುಲ್ವಾಡಿ ಮಾತನಾಡುತ್ತಾ, ಪಂಜಾಬ್ ಮತ್ತು ಗೂರ್ಖಾಲ್ಯಾಂಡ್ ಮೊದಲಾದ ಕೇಳಿಕೆಗಳು ನಮ್ಮ ದೇಶದ ಸಮಗ್ರತೆಯನ್ನು ನಾಶಪಡಿಸಬಹುದಾದ ಕೇಳಿಕೆಗಳು ಅಲ್ಲದೆ, ಬೆಳಗಾಂ ಚಳುವಳಿಯೂ ಸಹ ಭಾವೈಕ್ಯತೆ ಮುರಿಯುತ್ತಿದೆ ಎಂದರು. ಶಂಕರ್‌ಸೆಟ್ಟಿಗಾರ್, ಡೆವೀಡ್‌ಕರ್ಕಡ, ಎಸ್. ಎಸ್. ತೋನ್ಸೆ ಮಾತನಾಡಿದರು.

## ೫೦ ವರ್ಷ ತುಂಬಿದ ಭಾರತದ ವಿದ್ಯಾರ್ಥಿ ಚಳುವಳಿ

(5 ನೇ ಪುಟದಿಂದ)

ಪತ್ರಿಕಾ ಪ್ರಚಾರ ವಿದ್ಯಾರ್ಥಿ ಚಳವಳಿಯಲ್ಲಿ ಗೊಂದಲವೆಬ್ಬಿಸಿತು. ಕೆಲವು ಹೊಸ ಶಾಲೆಗಳ ಆರಂಭ ನೆಹರೂರವರ ಮಾತುಗಳಿಗೆ ವಾಸ್ತವಿಕವೆಂಬಂತೆ ತಳಹದಿಯನ್ನೊದಗಿಸಿತು. ಕೈಗಾರಿಕೆ, ಆಡಳಿತ ಇತ್ಯಾದಿ ವಿಭಾಗಗಳಲ್ಲಿ ದುಡಿಯಲು ಶೋಷಕವರ್ಗದ ಅವಶ್ಯಕತೆ ಪೂರೈಸಲು ಪರಣಿತರ ತರಬೇತಿಗೆ ಶಿಕ್ಷಣವನ್ನು ಸ್ವಲ್ಪ ಮಟ್ಟಿಗೆ ವಿಸ್ತರಿಸಲಾಯಿತು. ಆದ್ದರಿಂದ ಇದುವರೆಗಿನ ಶೈಕ್ಷಣಿಕ ಪ್ರಗತಿಯನ್ನು ಪ್ರಜಾಸತ್ತಾತ್ಮಕ ಶಿಕ್ಷಣದೊಂದಿಗೆ ಗೊಂದಲಗೊಳಿಸಬಾರದು. ಭಾರತದ ಸ್ವಾತಂತ್ರ್ಯ ಅರ್ಥಪೂರ್ಣವಾಗಬೇಕಾದರೆ ಎಲ್ಲಾ ರೀತಿಯ ಶೋಷಣೆಯನ್ನು ಅಂತ್ಯಗೊಳಿಸಬೇಕಾಗಿದೆ. ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕ ಶಿಕ್ಷಣವು ಕೇವಲ ಸಂವಿಧಾನದ ಆಭರಣವಾಗಿ ಉಳಿದಿದೆ. ಮೂಲಭೂತ ಹಕ್ಕುಗಳು ಕಾನೂನಿನ ಪುಸ್ತಕದಲ್ಲಿ ಅಲಂಕೃತವಾಗಿದೆ. ಅನಕ್ಷರತೆ, ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರವು ಕಾಂಗ್ರೆಸ್‌ನಿಂದ ಸಾಧ್ಯವೆಂಬ ಭ್ರಮೆಯಲ್ಲಿದ್ದ ಏ. ಐ. ಎಸ್. ಎಫ್. ನಾಮಮಾತ್ರ ಸಂಘಟನೆಯಾಗಿ ಉಳಿದಿದೆ. ಆದರೆ 1965, 66, 67ರ ಕಾಲಘಟ್ಟದಲ್ಲಿ ಪಶ್ಚಿಮ ಬಂಗಾಳ, ಕೇರಳ, ಆಂಧ್ರಪ್ರದೇಶ ಮುಂತಾಗಿ ದೇಶದ ವಿವಿಧ ರಾಜ್ಯಗಳಲ್ಲಿ ಪ್ರಬಲವಾಗಿ ವಿದ್ಯಾರ್ಥಿ ಚಳವಳಿಗಳು ರೂಪುಗೊಂಡು ಆಯಾ ರಾಜ್ಯ ಮಟ್ಟದಲ್ಲಿ ವಿದ್ಯಾರ್ಥಿ ಫೆಡರೇಷನ್ನುಗಳು ಸ್ಥಾಪನೆಗೊಂಡವು. ಅಂದಿನ ರಾಜಕೀಯ ವಿದ್ಯಾಮಾನಗಳ ಬೆಳವಣಿಗೆಗಳು ಇದಕ್ಕೆ ಹಿನ್ನೆಲೆಯಾಗಿದೆ. ಈ ಸಂದರ್ಭದಲ್ಲಿ ದೇಶಾದ್ಯಂತ ಜನತೆಯಲ್ಲಿ ಕಾಂಗ್ರೆಸ್ಸಿನ ವಿರೋಧಿ ಮನೋಭಾವ ರೂಪುಗೊಂಡಿತು. ಕಾಂಗ್ರೆಸ್ಸಿನ ಪ್ರಭಾವವನ್ನು ತೊಡೆದು ಹಾಕಿ ವಿರೋಧ ಪಕ್ಷಗಳ ಸರ್ಕಾರಗಳು ಅಸ್ತಿತ್ವಕ್ಕೆ ಬಂದವು, ಭಾರತದ ರಾಜಕೀಯದಲ್ಲಿ, ಇದೊಂದು ಮಹತ್ವದ ತಿರುವಾಗಿದೆ.

ಈ ಬೆಳವಣಿಗೆಯಲ್ಲಿ ಎರಡು ಪಕ್ಷಗಳು ಅದರಲ್ಲೂ ಪಶ್ಚಿಮ ಬಂಗಾಳ ಕೇರಳದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸಿವೆ. ಕೇರಳದಲ್ಲಿ ವಿಶ್ವವಿದ್ಯಾಲಯ ಆಡಳಿತ ಮಂಡಳಿಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ಮೊದಲ ಬಾರಿಗೆ 1967, 69ರಲ್ಲಿ ದೊರೆಯಿತು. ಇಡೀ ದೇಶದಲ್ಲೆ ಪ್ರಥಮವಾಗಿ ಕಾಂ||ಇ.ಎಂ.ಎಸ್ ನಂಬೂದರಿ ಪಾಡ್ ನೇತೃತ್ವದ ಸಂಯುಕ್ತರಂಗದ ಕೇರಳ ಸರ್ಕಾರವು ವಿಶ್ವವಿದ್ಯಾಲಯಗಳ ಕಾಯ್ದೆ ರಚಿಸಿ ವಿದ್ಯಾರ್ಥಿ ಪ್ರಾತಿನಿಧ್ಯಕ್ಕೆ ಅವಕಾಶ ಮಾಡಿತ್ತು. ಪ. ಬಂಗಾಳ-ಕೇರಳ ಈ ಎರಡೂ ರಾಜ್ಯಗಳಲ್ಲಿ ವಿದ್ಯಾರ್ಥಿಗಳ ಬೇಡಿಕೆಗಳಿಗೆ ದೊರೆತ ಜಯ ದೇಶದ ವಿದ್ಯಾರ್ಥಿ ಚಳವಳಿಗೆ ವಾಸ್ತವಿಕ ತಳಹದಿ ಒದಗಿಸಿದವು. ದೇಶದ ವಿವಿಧ ರಾಜ್ಯಗಳಲ್ಲಿನ ಸಮಾನ ಮನೋಭಾವದ ಸಮರಶೀಲ ವಿದ್ಯಾರ್ಥಿ ಫೆಡರೇಷನ್ ಘಟಕಗಳ ಪ್ರತಿನಿಧಿಗಳು ಜೂನ್ 1ರಿಂದ 7, 1970 ರಲ್ಲಿ ಕಲ್ಕತ್ತದಲ್ಲಿ ಸಭೆ ಸೇರಿದರು. ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು.

1970 ಡಿಸೆಂಬರ್ 27ರಿಂದ 30ರವರೆವಿಗೆ ಕೇರಳದ ತಿರುವನಂತಪುರದಲ್ಲಿ ಜರುಗಿದ ಅಖಿಲಭಾರತ ಸಮ್ಮೇಳನದಲ್ಲಿ 624 ಪ್ರತಿನಿಧಿಗಳು, 127 ವೀಕ್ಷಕರು ಪಾಲ್ಗೊಂಡು ಎಸ್.ಎಫ್.ಐ. ಕಾರ್ಯಕ್ರಮ, ಬಾವುಟ ಇತ್ಯಾದಿಗಳನ್ನು ಅಂಗೀಕರಿಸಿ ಕೇಂದ್ರ ನಾಯಕತ್ವವನ್ನು ಚುನಾಯಿಸಲಾಯಿತು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಸಂಘಟನೆಯ ಸ್ಥಾಪನಾ ಸಮ್ಮೇಳನವನ್ನು ದುಡಿಯುವ ಜನತೆಯ ಜನಪ್ರಿಯ ನಾಯಕ ಕಾ||ಎ.ಕೆ. ಗೋಪಾಲ್‌ರವರು ಉದ್ಘಾಟಿಸಿದರು. ವೈಜ್ಞಾನಿಕ ಪ್ರಜಾಸತ್ತಾತ್ಮಕ ಶಿಕ್ಷಣ ಪದ್ಧತಿಗಾಗಿ, ಉದ್ಯೋಗದ ಹಕ್ಕಿಗಾಗಿ ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆಗಾಗಿ ಹಾಗೂ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಮಾಜವಾದದ ಮೌಲ್ಯಗಳಿಂದಾಗಿ ಹೋರಾಡಲು ಸಮರಶೀಲ ಸಂಘಟನೆಯೊಂದನ್ನು ಕಟ್ಟಿ ಬೆಳೆಸುವ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು. *

**ಸಂಗ್ರಹಾನುವಾದ :**
ಎಸ್. ಆರ್. ಆರಾಧ್ಯ
ಎಸ್. ವೈ. ಗುರುಶಾಂತ್

## ಕೊನೆ ಎಂದು?

(5ನೇ ಪುಟದಿಂದ)

ಕಾಂಗ್ರೆಸ್ ಪಕ್ಷದ ಪರಸ್ಪರ ಕಚ್ಚಾಡುವ ಗುಂಪುಗಳು ತಮ್ಮ ಹೊಡೆದಾಟದಲ್ಲಿ ಈ ಎಲ್ಲಾ ಅಂಶಗಳನ್ನು ತಮ್ಮ ಅಧಿಕಾರಲಾಲಸೆಗಾಗಿ ಎಗ್ಗಿಲ್ಲದೆ ಬಳಸಿಕೊಳ್ಳುತ್ತಿರುವುದು.

ಈ ಭೀಕರ ಸಮಸ್ಯೆಗೆ ನಿಜವಾದ ಪರಿಹಾರ ಏನು, ಕಾಂಗ್ರೆಸ್ (ಐ) ಸರಕಾರಗಳು ಸದಾ ಏಕೆ ಇದರಲ್ಲಿ ವಿಫಲಗೊಳ್ಳುತ್ತಿವೆ. ಎಂಬುದು ಇದರಿಂದ ಸ್ಪಷ್ಟವಾಗುವುದಿಲ್ಲವೇ ?

## ಆಗಸ್ಟ್ ೨೦ ರಂದು ಆಟೋ ಚಾಲಕರ
# ರಾಜ್ಯಾದ್ಯಂತ ಮುಷ್ಕರ

ಕರ್ನಾಟಕ ರಾಜ್ಯ ಸರ್ಕಾರವು ಆಟೋ ರಿಕ್ಷಾಗಳ ಪರ್ಮಿಟ್, ರೀಗ್ರಾಂಟ್, ಪ್ಲಾಗ್ ಮೀಟರ್‌ಗಳನ್ನು ರಿಕ್ಷಾಗಳಿಗೆ ಅಳವಡಿಸುವುದರ ಬಗ್ಗೆ ಮತ್ತು ಮೀಟರ್‌ದರದ ಬಗ್ಗೆ ಸಾರಿಗೆ ಸಚಿವರು ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿದ್ದಾರೆ.

ಆಟೋರಿಕ್ಷಾ ಚಾಲಕರ ಸಮಸ್ಯೆಗಳ ಬಗ್ಗೆ ಸಂಘದ ಪ್ರತಿನಿಧಿಗಳೊಡನೆ ಚರ್ಚಿಸದೆ ಏಕಪಕ್ಷೀಯ ತೀರ್ಮಾನ ತೆಗೆದುಕೊಂಡಿರುವ ಮಂತ್ರಿಯವರ ಧೋರಣೆಯನ್ನು ಪ್ರತಿಭಟಿಸಿ ದಿನಾಂಕ 11-8-86ರಂದು ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಚಾಲಕರ ಧರಣಿ ನಡೆಸಲಾಯಿತು.

ಸರ್ಕಾರದ ಈ ತೀರ್ಮಾನದಿಂದ ಸುಮಾರು 35 ಸಾವಿರ ಚಾಲಕರು ತೊಂದರೆಗೀಡಾಗುವರಲ್ಲದೆ ಈಗ ಚಾಲ್ತಿಯಲ್ಲಿರುವ ಯನ್ನೆ ಮೀಟರ್‌ಗಳಲ್ಲಿ ಯಾವುದೇ ದೋಷವಿಲ್ಲದಿದ್ದರೂ ಯಾವುದೋ ಪ್ರಭಾವದಿಂದಾಗಿ ಪ್ಲಾಗ್ ಮೀಟರ್ ಅಳವಡಿಸುವ ಧೋರಣೆಯನ್ನು ಪ್ರತಿಭಟಿಸಿ 18-8-86 ರಿಂದ ವಿಧಾನ ಸೌಧದ ಮುಂದೆ ಸರದಿ ಉಪವಾಸ ಸತ್ಯಾಗ್ರಹ ನಡೆಸಿ 20-8-86ರಂದು ಕರ್ನಾಟಕ ರಾಜ್ಯಾದ್ಯಂತ ಆಟೋ ಮುಷ್ಕರ ನಡೆಸಲು ತೀರ್ಮಾನಿಸಲಾಗಿದೆ,

## ಫೌಂಡ್ರಿ ಮಾಲೀಕರಿಗೆ ಪ್ರತಿಭಟನೆ

ಭದ್ರಾವತಿಯ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿರುವ ರಾಜರಾಜೇಶ್ವರಿ ಫೌಂಡ್ರಿಯಲ್ಲಿ ಕೆಲಸ ಮಾಡುತ್ತಿದ್ದ ವೆಂಕಟೇಶ್ ಎಂಬ ಕಾರ್ಮಿಕನನ್ನು ವಿನಾಕಾರಣ ಕೆಲಸದಿಂದ ತೆಗೆದು ಹಾಕಿದ್ದನ್ನು ಭದ್ರಾವತಿಯ ಜನರಲ್ ಎಂಪ್ಲಾಯೀಸ್ ಮತ್ತು ಹಮಾಲಿ ಕಾರ್ಮಿಕರ ಸಂಘ ಪ್ರತಿಭಟಿಸಿದೆ. ಈ ಕ್ರಮವು ಕಾನೂನು ಬಾಹಿರವೆಂಬುದನ್ನು ಮಾಲೀಕರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ವಿಫಲವಾದದ್ದರಿಂದ ಸಂಘವು ಫೌಂಡ್ರಿಯ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿತೆಂದು ಸಂಘದ ಹೇಳಿಕೆ ತಿಳಿಸಿದೆ.

*

# ಬೀಡಿ ಕಾರ್ಮಿಕರಿಗೆ ಮೋಸ

ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರು ಮಜೂರಿ ಮತ್ತು ಬೋನಸ್ ಹೆಚ್ಚಳಕ್ಕಾಗಿ ಕಳೆದವರ್ಷದ ಡಿಸೆಂಬರ್‌ನಲ್ಲಿ ಚಳವಳಿಗೆ ಇಳಿದಾಗ ರಾಜ್ಯ ಸರ್ಕಾರ ಈ ವರ್ಷದ ಮಾರ್ಚ್‌ನಲ್ಲಿ ಬೀಡಿಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗದಿಗೊಳಿಸುವ ಆಶ್ವಾಸನೆಯನ್ನು ನೀಡಿ ಕಾರ್ಮಿಕರು ಹೋರಾಟವನ್ನು ನಿಲ್ಲಿಸಬೇಕೆಂದು ಕೇಳಿಕೊಂಡಿತ್ತು. ಆದರೆ ಮಾರ್ಚ್ ಮುಗಿದು ನಾಲ್ಕು ತಿಂಗಳು ಕಳೆದ ನಂತರ ಇದೀಗ ಸರ್ಕಾರ ಪ್ರಕಟಿಸಿರುವ ಕನಿಷ್ಠ ಕೂಲಿಯು ಕಾರ್ಮಿಕರಿಗೆ ಮಾಡಿರುವ ದೊಡ್ಡ ವಂಚನೆಯಾಗಿದೆ. ಸರಕಾರ ನೇಮಿಸಿದ ಕನಿಷ್ಠ ಕೂಲಿ ಸಲಹಾ ಸಮಿಯು ಸಾವಿರ ಬೀಡಿ ಕಟ್ಟಲು 12ರೂ ಕನಿಷ್ಠ ಕೂಲಿ ಹಾಗೂ ಬೆಲೆ ಏರಿಕೆಯ 470 ಪಾಯಿಂಟಿನ ಆಧಾರದ ಮೇಲೆ ನಂತರದ ಪ್ರತೀ ಪಾಯಿಂಟಿಗೆ 3 ಪೈಸೆಯಂತೆ ತುಟ್ಟಿಭತ್ಯೆ ನೀಡಬೇಕೆಂದು ಜನವರಿಯಲ್ಲಿ ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಶಿಫಾರಸು ಮಾಡಿತ್ತು. ಆದರೆ ಸರಕಾರವು ತಾನೇ ನೇಮಿಸಿದ ಸಮಿತಿಯ ಶಿಫಾರಸನ್ನು ಕಸದ ಬುಟ್ಟಿಗೆ ಹಾಕಿ ತಾನೇ ಏಕಪಕ್ಷೀಯವಾಗಿ ಕಳೆದ ವರ್ಷದ ಡಿಸೆಂಬರ್‌ನಲ್ಲಿದ್ದ ಬೆಲೆ ಸೂಚ್ಯಂಕದ 680 ಪಾಯಿಂಟನ್ನೇ ಆಧಾರವಾಗಿಟ್ಟುಕೊಂಡು ಕೇವಲ 11-50 ರೂಪಾಯಿ ಕನಿಷ್ಠ ಕೂಲಿಯನ್ನು ನಿಗದಿಮಾಡಿದೆ. ಇದರ ವಿರುದ್ಧ ತೀವ್ರವಾಗಿ ಪ್ರತಿಭಟಿಸಿರುವ ಸೌತ್ ಕೆನರಾ ಬೀಡಿ ವರ್ಕರ್ಸ್ ಫೆಡರೇಶನ್ ಸರ್ಕಾರವು ಬೀಡಿ ಮಾಲಕರಿಂದ ಲಂಚ ಪಡೆದು ಈ ರೀತಿಯ ನಿರ್ಣಯವನ್ನು ಕೈಗೊಂಡಿರುವಂತೆ ಕಾಣುತ್ತದೆಂದು ಕಟುವಾಗಿ ಟೀಕಿಸಿದೆ.

ಸಾವಿರ ಬೀಡಿಗೆ ಕನಿಷ್ಠ ಕೂಲಿ 16-38 ನೀಡಬೇಕೆಂದೂ, ವಾರಕ್ಕೆ ಮೂರು ನಾಲ್ಕು ದಿನಗಳು ಮಾತ್ರ ಕೆಲಸಕೊಡುತ್ತಿರುವುದನ್ನು ತಪ್ಪಿಸಿ ವಾರಕ್ಕೆ ಪೂರ್ತಿ ಆರು ದಿನಗಳ ಕಾಲ ಕೆಲಸ ನೀಡಬೇಕೆಂದು ತಪ್ಪಿದರೆ ಕೆಲಸವಿಲ್ಲದ ದಿನಗಳಲ್ಲೂ ಸಹ ಮಜೂರಿ ಕೊಡಬೇಕೆಂದು ಫೆಡರೇಶನ್ ಅಗ್ರಹಪಡಿಸಿದೆ. ಮೇಲ್ಕಂಡ ಬೇಡಿಕೆಗಳನ್ನು ಸರ್ಕಾರ ಈಡೇರಿಸದಿದ್ದಲ್ಲಿ ಆಗಸ್ಟ್ 14 ರಂದು ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಬೀಡಿ ಮಾಲಿಕರ ಡಿಪೋ ಮುಂಭಾಗದಲ್ಲಿ ಮತ್ತು ಸರ್ಕಾರಿ ಕಚೇರಿಗಳ ಎದುರು ಪ್ರತಿಭಟನಾ ಪ್ರದರ್ಶನ ನಡೆಸುವುದಾಗಿ ಫೆಡರೇಶನ್ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಬೀಡಿ ಕಾರ್ಮಿಕರ ಕನಿಷ್ಠ ಕೂಲಿಯಲ್ಲಿ ವಂಚನೆಯಾಗಿರುವುದನ್ನು ಖಂಡಿಸಿರುವ ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್ ಇದು ರಾಜ್ಯ ಸರ್ಕಾರವು ಬೀಡಿ ಕಾರ್ಮಿಕರಿಗೆ ಮಾಡಿರುವ ಮಹಾ ದ್ರೋಹವೆಂದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಆಗಸ್ಟ್ 3 ರಂದು ಮೇಲ್ಕಂಡ ಸಂಘವು 13 ನೆಯ ವಾರ್ಷಿಕ ಮಹಾಸಭೆಯನ್ನು ನಡೆಸಿ ಮುಂದಿನ ವರ್ಷದ ಸಂಘದ ಪದಾಧಿಕಾರಿಗಳನ್ನಾಗಿ ಕಾ. ಕೆ. ನಾರಾಯಣ ಶೆಟ್ಟಿ (ಅಧ್ಯಕ್ಷ), ಕಾ॥ ಯು. ಜನಾರ್ಧನ ನ್ಯಾಕ್, ಈಶ್ವರ, ಲಿಗೋರಿ ವೇಗಸ್ (ಉಪಾಧ್ಯಕ್ಷರು) ಕಾ. ಸುಕುಮಾರ್ (ಕಾರ್ಯದರ್ಶಿ) ಕಾ. ಪಿ. ಬಾಬು, ಕಾ. ಪದ್ಮಾವತಿ (ಸಹ ಕಾರ್ಯದರ್ಶಿಗಳು) ಕಾ. ಕೆ. ಮಂಜಪ್ಪ (ಕೋಶಾಧಿಕಾರಿ) ಅವರುಗಳನ್ನು ಒಳಗೊಂಡ 32 ಸದಸ್ಯರ ಕಾರ್ಯಕಾರೀ ಸಮಿತಿಯನ್ನು ಆರಿಸಿತೆಂದು ಪ್ರಕಟನೆ ತಿಳಿಸಿದೆ.

## ಬೀಡಿ ಕಾರ್ಮಿಕರಿಗೆ ಬೆಂಬಲ

ಕನಿಷ್ಠ ವೇತನಕ್ಕಾಗಿ ಒತ್ತಾಯಿಸಿ ನೌಕರಿಯಿಂದ ವಜಾ ಆಗಿರುವ ಹುಬ್ಬಳ್ಳಿಯ ದರಬಾರ್ ಬೀಡಿ ಕಾರ್ಮಿಕರು ನಡೆಸುತ್ತಿರುವ ಹೋರಾಟಕ್ಕೆ ದಿ ಇಂಡಿಯನ್ ಪ್ಲಾಯ್‌ವುಡ್ ಕಾರ್ಮಿಕ ಸಂಘ ತನ್ನ ಬೆಂಬಲವನ್ನು ವ್ಯಕ್ತಪಡಿಸಿದೆ.

ಮೇಲ್ಕಂಡ ಬೀಡಿ ಕಾರ್ಮಿಕರು ನಡೆಸುತ್ತಿರುವ ಸರದಿ ಉಪವಾಸ ಸತ್ಯಾಗ್ರಹಕ್ಕೆ ತನ್ನ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಪ್ಲಾಯ್‌ವುಡ್ ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಕಾ. ಕಲ್ಲಪ್ಪ ಬೆನಕೊಪ್ಪ ಅವರ ನೇತೃತ್ವದಲ್ಲಿ ಅದೇ ಸಂಘದ ಕಾ. ಎಂ ಎಸ್ ಗೋಗೇರಿ ಹಡಪದ ಮತ್ತು ಕಾ. ಮಹ್ಮದ್ ಜಾಫರ್ ಶೇಖ ಅವರುಗಳು ಜುಲೈ 26 ರಂದು ಉಪವಾಸ ಸತ್ಯಾಗ್ರಹದಲ್ಲಿ ಪಾಗ್ಗೊಂಡಿದ್ದರು. ನಂತರ ಅದೇ ದಿನ ನಡೆಸಿದ ಬಹಿರಂಗ ಸಭೆಯಲ್ಲಿ ಬೀಡಿ ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಲಾಯಿತೆಂದು ವರದಿ ತಿಳಿಸಿದೆ.

## ವಾರದಲ್ಲಿ 6 ದಿನಗಳ ಕೆಲಸ ಕೊಡುವಂತೆ ಒತ್ತಾಯ

ಮುಲ್ಕಿ ಪ್ರದೇಶದ ಬೀಡಿ ಕೆಲಸಗಾರರ 6ನೇ ವಾರ್ಷಿಕ ಮಹಾಸಭೆಯು 27-7-86ರಂದು ಸಾಧು ಅಮೀನರ ಅಧ್ಯಕ್ಷತೆಯಲ್ಲಿ ಜರುಗಿತು.

ವಾರದಲ್ಲಿ 6 ದಿನಗಳಲ್ಲಿ ಪೂರ್ತಿ ಬೀಡಿ ಕಾರ್ಮಿಕರಿಗೆ ಕೆಲಸ ಸಿಗುವಂತಾಗಬೇಕೆಂದೂ, ಬೀಡಿ ಕೈಗಾರಿಕೆಯಲ್ಲಿ ಕನಿಷ್ಠ ಕೂಲಿಯನ್ನು ಕೂಡಲೇ ಪ್ರಕಟಿಸಿ ಜಾರಿಗೊಳಿಸಬೇಕೆಂದು ಠರಾವೊಂದರಲ್ಲಿ ಒತ್ತಾಯಿಸಲಾಯಿತು.

ಮುಂದಿನ ವರ್ಷದ ಆಡಳಿತ ಸಮಿತಿಗೆ ಶ್ರೀಗಳಾದ ಕೃಷ್ಣ ಅಮೀನ್ ಅಧ್ಯಕ್ಷರಾಗಿ, ರಾಮ ಸೇರಿಗಾರ ಮತ್ತು ಜಾನಕಿಶೆಟ್ಟಿ ಉಪಾಧ್ಯಕ್ಷರಾಗಿ ಡೋಗು ಸುವರ್ಣ ಕಾರ್ಯದರ್ಶಿ, ನಿರ್ಮಲ ಮತ್ತು ರತ್ನ, ಜತೆ ಕಾರ್ಯದರ್ಶಿಗಳಾಗಿ ರಮೇಶ ಬತ್ರನ್ನ ಕೋಶಾಧಿಕಾರಿಯಾಗಿರುವ 31 ಮಂದಿಯನ್ನು ಆರಿಸಲಾಯಿತು.

ಸಭೆಯಲ್ಲಿ ಸಿ ಐ ಟಿ ಯು ವಿನ ಕೆ. ಶಂಕರ ಫೆಡರೇಶನ್‌ನ ಯು ಬಿ ಲೋಕಯ್ಯ, ಡೇವಿಡ್ ಕರ್ಕರ್ದ, ಕೃಷ್ಣ ಅಮೀನ್ ಮೊದಲಾದವರು ಮಾತನಾಡಿದರು.

## ಮುಚ್ಚಿರುವ ಕೆ.ಆರ್. ಮಿಲ್ ತೆರವಿಗೆ ಒತ್ತಾಯಿಸಿ ಮೈಸೂರು ಬಂದ್‌ಗೆ ಕರೆ

ಕಳೆದ ಎರಡು ವರ್ಷಗಳಿಂದ ಮೈಸೂರಿನ ಕೆ.ಆರ್. ಮಿಲ್ (ಹತ್ತಿಗಿರಣಿ ಕಾರ್ಖಾನೆ) ಮುಚ್ಚಲ್ಪಟ್ಟಿದ್ದು ಅದರಲ್ಲಿ ದುಡಿಯುತ್ತಿದ್ದ ಸುಮಾರು 4 ಸಾವಿರ ಕಾರ್ಮಿಕರು ಹಾಗು ಅವರ ಕುಟುಂಬದ ಸದಸ್ಯರು ಅಪಾರ ಸಂಕಷ್ಟಕ್ಕೆ ಒಳಗಾಗಿದ್ದು, ಬೀದಿ ಪಾಲಾಗಿದ್ದಾರೆ.

ಮಿಲ್ಲನ್ನು ತೆರೆಸುವ ಸರಕಾರದ ಭರವಸೆ, ಆಡಳಿತ ವರ್ಗದ ಘೋಷಣೆ ಎಲ್ಲವೂ ಈವರೆಗೆ ನಿರರ್ಥಕವಾಗಿದೆ. ಕಳೆದ ಕೆಲವು ಸಮಯದಿಂದ ಇಲ್ಲಿನ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತರಾಗುತ್ತಿದ್ದಾರೆ.

ಬೇಶರತ್ತಾಗಿ ಕೆ.ಆರ್. ಮಿಲ್ಲನ್ನು ಕೂಡಲೇ ತೆರೆಸಲು ಒತ್ತಾಯಿಸಲು 21-8-1986ರಂದು "ಮೈಸೂರು ಬಂದ್" ಆಚರಿಸಲು ಸಿ.ಐ.ಟಿ.ಯು. ಮತ್ತು ಇನ್‌ಟಕ್ ನೇತೃತ್ವದ ಜಂಟೀ ಹೋರಾಟ ಸಮಿತಿಯು ಕರೆ ನೀಡಿದೆಯೆಂದು ಹೇಳಿಕೆ ತಿಳಿಸಿದೆ.

## ಕಲ್ಕುಣಿಕೆಯಲ್ಲಿ ಡಿ.ವೈ.ಎಫ್.ಐ.

ಮೈಸೂರು ಜಿಲ್ಲೆಯ ಹುಣಸೂರು ನಗರದ ಕಲ್ಕುಣಿಕೆಯಲ್ಲಿ ಇತ್ತೀಚೆಗೆ ಡಿ.ವೈ.ಎಫ್.ಐ. ಘಟಕವನ್ನು ಆರಂಭಿಸಲಾಯಿತು.

ಘಟಕದ ಸಂಚಾಲಕರಾಗಿ ರಾಮಚಂದ್ರ, ಸಹ ಸಂಚಾಲಕರಾಗಿ ರೇವಣ್ಣ, ಸಮಿತಿ ಸದಸ್ಯರಾಗಿ ಎಸ್. ಪ್ರಕಾಶ್, ಸಿದ್ದರಾಜು ಹಾಗೂ ಎಂ. ಆರ್. ಬಸವರಾಜ್ ಆಯ್ಕೆಯಾದರೆಂದು ವರದಿಯಾಗಿದೆ.

# ಆಗಸ್ಟ್ ೧ : ರೈತರ ಧರಣಿ ಕಾರ್ಯಕ್ರಮ

### ಬಳ್ಳಾರಿ

ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಸಮಿತಿಯ ಕರೆಯ ಮೇರೆಗೆ ಆಗಸ್ಟ್ 1 ರಂದು ಬಳ್ಳಾರಿಯ ಜಿಲ್ಲಾಧಿಕಾರಿ ಕಚೇರಿಯೆದುರು ಧರಣಿ ಸತ್ಯಾಗ್ರಹ ನಡೆಸಿದ ಬಗ್ಗೆ ವರದಿಯಾಗಿದೆ. ಜಿಲ್ಲೆಯ ಕೊಟ್ಟೂರು ತಾಲೂಕೊಂದನ್ನು ಬಿಟ್ಟು ಉಳಿದ ಎಲ್ಲಾ ತಾಲ್ಲೂಕುಗಳಿಂದ ಸಾವಿರಕ್ಕೂ ಹೆಚ್ಚು ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಲುವಾಗಿ ಜುಲೈ 15 ರಂದು ಹಗರಿ ಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ, ಜುಲೈ 17 ರಂದು ಶಿರಗುಪ್ಪ ತಾಲೂಕಿನಲ್ಲೂ ಸಾಂಕೇತಿಕ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತೆಂದು ವರದಿ ತಿಳಿಸಿದೆ. ಅಲ್ಲದೆ ಪ್ರತೀ ತಾಲ್ಲೂಕು ಕೇಂದ್ರ ಹಾಗೂ ಗ್ರಾಮಗಳಲ್ಲಿ ರೈತರ ಬೇಡಿಕೆಗಳನ್ನೊಳಗೊಂಡ ಗೋಡೆ ಬರಹವನ್ನು ಮಾಡಲಾಗಿತ್ತು, ರೈತರ ಬೇಡಿಕೆಗಳ ಪಟ್ಟಿಯನ್ನು ತಯಾರಿಸಿ ಸ್ಥಳೀಯ ತಹಸೀಲ್ದಾರುಗಳಿಗೆ ಮನವಿ ಅರ್ಪಿಸಿ ರೈತ ಪ್ರತಿನಿಧಿಗಳೊಡನೆ ಚರ್ಚೆಗೆ ದಿನವನ್ನು ಗೊತ್ತುಪಡಿಸಿ ಅಹ್ವಾನಿಸಬೇಕೆಂದು ಕೋರಿಕೊಳ್ಳಲಾಗಿತ್ತೆಂದು ತಿಳಿದು ಬಂದಿದೆ.

ಆಗಸ್ಟ್ 1 ರಂದು ಬಳ್ಳಾರಿಯ ಜಿಲ್ಲಾಧಿಕಾರೀ ಕಚೇರಿ ಎದುರು ಬೆಳಗಿನಿಂದ ಸಂಜೆಯವರೆಗೆ ಧರಣಿ ಸತ್ಯಾಗ್ರಹ ನಡೆದು ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಅರ್ಪಿಸಲಾಗಿದ್ದು, ಆಗಸ್ಟ್ 15ರ ನಂತರ ರೈತ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸುವ ಭರವಸೆ ನೀಡಲಾಗಿದೆಯೆಂದು ವರದಿಯಾಗಿದೆ.

ಸಂಜೆ 5 ಗಂಟೆಗೆ ರೈತರ ಬೃಹತ್ ಮೆರವಣಿಗೆಯನ್ನು ನಗರದ ಪ್ರಮುಖ ಬೀದಿಗಳಲ್ಲಿ ನಡೆಸಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾ. ಬಿ. ಪರಶುರಾಮ, ಕಾ. ಯು. ಬಸವರಾಜ್, ಕಾ. ಪ್ರಸನ್ನಕುಮಾರ್, ಕಾ. ಪಿ. ಆರ್. ವೆಂಕಟೇಶ್ ಹಾಗೂ ಕಾ. ಮೇಟಿ ಕೊಟ್ರಪ್ಪ ಅವರುಗಳು ಮಾತನಾಡಿದರೆಂದು ಹೇಳಿಕೆ ತಿಳಿಸಿದೆ.

### ಮೈಸೂರು :

ಕರ್ನಾಟಕ ಪ್ರಾಂತ ರೈತ ಸಂಘ (ಎ.ಐ.ಕೆ.ಎಸ್.) ಕರೆಯಂತೆ ಆಗಸ್ಟ್ ಒಂದನೇ ದಿನಾಂಕದಂದು ಮೈಸೂರಿನಲ್ಲಿ ರೈತ ಸಂಘದ ಕಾರ್ಯಕರ್ತರು ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ನಡೆಸಿದರು. ರೈತರ ಹಾಗೂ ಕೃಷಿ ಕೂಲಿಗಾರರ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ ಸರಕಾರ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಲಾಯಿತು.

ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಎಂ. ಎಸ್. ಉಗ್ರಪ್ಪನವರ ನೇತೃತ್ವದಲ್ಲಿ ನಿಯೋಗವೊಂದು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಿತೆಂದು ವರದಿಯಾಗಿದೆ.

## ಕಾರ್ಮಿಕ ಮುಖಂಡ ಪಾಲ್ ಮೇಲೆ ಪೋಲೀಸ್ ಹಲ್ಲೆ

ಸಕಲೇಶಪುರದ ಕರ್ನಾಟಕ ತೋಟ ಕಾರ್ಮಿಕರ ಸಂಘದ ಉಪಕಾರ್ಯದರ್ಶಿ ಕಾ. ಪಾಲ್ ಯಾಜಿನ್ ಡಿಸೋಜರವರನ್ನು ಆಗಸ್ಟ್ 4 ರಂದು ಸಕಲೇಶಪುರ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿ ಎಂಬುವರು ವಿನಾಕಾರಣ ಅಮಾನುಷವಾಗಿ ಥಳಿಸಿದ್ದಾರೆಂದು ಕರ್ನಾಟಕ ತೋಟ ಕಾರ್ಮಿಕರ ಸಂಘದ ಕಾರ್ಯದರ್ಶಿ ಕಾ ವಿ. ಸುಕುಮಾರ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಕಲೇಶಪುರದ ಮಲಸಾಗರ ಎಸ್ಟೇಟಿನ ಕಾರ್ಮಿಕ ವೀರರಾಘವ ಎಂಬುವರ ಸಹೋದರ ಕಾಣೆಯಾಗಿದ್ದಾನೆಂದು ದೂರು ಅರ್ಜಿಯನ್ನು ಸಲ್ಲಿಸಲು ಅವರೊಂದಿಗೆ ಕಾ. ಪಾಲ್ ಅವರು ಹೋದಾಗ ಠಾಣೆಯ ಸಬ್‌ಇನ್ಸ್‌ಪೆಕ್ಟರ್ "ಏನೋ ರಿಕಮೆಂಡೇಶನ್‌ಗೆ ಬಂದಿದ್ದೀಯಾ" ಎಂದು ಮುಂತಾಗಿ ಹೀನಾಮಾನವಾಗಿ ಬಯ್ದು, ಬೂಟು ಕಾಲಿನಿಂದ ಒದ್ದು ದೊಣ್ಣೆಯಿಂದ ಸಿಕ್ಕಾಪಟ್ಟೆ ಥಳಿಸಿದ್ದಾರೆಂದು ಹೇಳಿಕೆ ತಿಳಿಸಿದೆ, ನಂತರ ಅವರ ಮೇಲೆ ಸುಳ್ಳು ಕೇಸನ್ನು ದಾಖಲೆ ಮಾಡಿಕೊಂಡು, ಈ ಬಗ್ಗೆ ಏನಾದರೂ ಪ್ರತಿಭಟನೆ ಕ್ರಮ ಕೈಗೊಂಡರೆ ಸುಟ್ಟು ಬಿಡುವುದಾಗಿಯೂ, ಇಂತಹ ಸಾವಿರ ಸಾವಿರ ಕಾರ್ಮಿಕರನ್ನು ತಾನು ಬೆಂಗಳೂರಿನಲ್ಲಿ ನೋಡಿ ಬಂದಿರುವುದಾಗಿಯೂ ಸಬ್‌ಇನ್ಸ್‌ಪೆಕ್ಟರ್ ಬೆದರಿಸಿದ್ದಾಗಿ ತಿಳಿದು ಬಂದಿದೆ.

ಈ ಹೇಯಕೃತ್ಯವನ್ನು ಎಸಗಿ ಸಂಘದ ಚಟುವಟಿಕೆಗೆ ಬೆದರಿಕೆ ಒಡ್ಡುತ್ತಿರುವ ಈ ಅಧಿಕಾರಿಯನ್ನು ಕೂಡಲೇ ಸಸ್ಪೆಂಡ್ ಮಾಡಿ ತನಿಖೆ ನಡೆಸಬೇಕೆಂದು ಸಂಘವು ಹಾಸನ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದೆ.

## ರಾಷ್ಟ್ರೀಯ ಸಮಗ್ರತಾ ವಾರಾಚರಣೆ

(1ನೇ ಪುಟದಿಂದ)

ಶಕ್ತಿಗಳನ್ನು ಸಂದರ್ಭವಾದಿ ರೀತಿಯಲ್ಲಿ ಉಪಯೋಗಿಸುತ್ತಿರುವುದು ದುರದೃಷ್ಟಕರ. ಕಾಂಗ್ರೆಸ್ (ಐ) ಯನ್ನೇ ತೆಗೆದುಕೊಳ್ಳಿರಿ: ಪಂಜಾಬಿನಲ್ಲಿ ಬಿನ್ದ್ರನ್‌ವಾಲನನ್ನು ಹುಟ್ಟಿಸಿ ಹಾಕಿದರು. ಕಾಶ್ಮೀರದಲ್ಲಿ ಡಾ|| ಫರೂಕರ ವಿರುದ್ಧ 'ಷಾ'ರವರ ಮತೀಯವಾದಿ, ಭ್ರಷ್ಟ ಮತ್ತು ಪಾಕಿಸ್ತಾನ ಮೂಲಭೂತವಾದಿಗಳ ಪರಸರ್ಕಾರಕ್ಕೆ ಬೆಂಬಲಕೊಟ್ಟರು. ಅಸ್ಸಾಂನಲ್ಲಿ ಪ್ರತ್ಯೇಕವಾದಿಗಳಿಗೇನೇ ಕೊನೆಗೆ ಶರಣರಾದರು. ಮಿಜೋರಾಮಿನಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪ್ರತ್ಯಕ್ಷ ಬೆಂಬಲದಿಂದ 'ಸ್ವತಂತ್ರ' ಮಿಜೋರಾಮಿಗಾಗಿ ಹಲವು ವರ್ಷಕಾಲ ಸಶಸ್ತ್ರ ಹೋರಾಟ ಮಾಡಿದ ಲಾಲ್‌ಡೆಂಗಾ'ನಿಗೆ ಚುನಾಯಿತ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸಿ ಮುಖ್ಯಮಂತ್ರಿಯ ಪಟ್ಟ ಕಟ್ಟಿದರು. (ಅವನು ಈಗ ಮಹಾ ಮಿಜೋರಾಮ್ ಘೋಷಣೆ ಕೊಡುತ್ತಿದ್ದಾನೆ!) ಚುನಾವಣೆಗಳನ್ನು ಗೆಲ್ಲುವ ದೃಷ್ಟಿಯಲ್ಲಿ ಮುಸ್ಲಿಂ ಮೂಲಭೂತವಾದಿಗಳ ಮತಗಳನ್ನು ಪಡೆಯುವ ಸಲುವಾಗಿ 'ಮುಸ್ಲಿಂ ಸ್ತ್ರೀಯರಿಗೇನೇ ದ್ರೋಹ ಬಗೆಯುವ' ಸ್ತ್ರೀಯರ ವಿಚ್ಛೇದನಾ ರಕ್ಷಣಾ ಕಾನೂನನ್ನು ಅಂಗೀಕರಿಸಿತು. (ಈಗ ಮುಸ್ಲಿಂ ಸ್ತ್ರೀಯರು ಈ ಕಾನೂನಿನ ದೆಸೆಯಿಂದ ಹೆಚ್ಚೆಚ್ಚಾಗಿ ಬೀದಿಗೆ ಬೀಳುವುದು ಕಾಣಬರುತ್ತಿದೆ.) ಹಿಂದೂಗಳಿಗೆ ಕೋಪವಾಗಬಾರದೆಂದು 4 ದಶಕಗಳಿಂದ ಕೋರ್ಟಿನಲ್ಲಿ ಕೊಳೆಯುತ್ತಿದ್ದ 'ರಾಮಜನ್ಮಭೂಮಿ'ಯ ಹೆಸರಿನಲ್ಲಿ 'ಗುಡಿ'ಯ ಬಾಗಿಲನ್ನು ತೆರೆದು ದೇಶದ ಎಲ್ಲೆಡೆ ಮುಸ್ಲಿಂರನ್ನು ಕೆರಳಿಸಿತು. ಹಿಂದೂ ಮುಸ್ಲಿಂ ದಂಗೆಗಳಿಗೆ ಉತ್ತೇಜನ ಕೊಟ್ಟಿತು....

ಇನ್ನು ಬಂಡವಾಳಶಾಹಿ ಭೂಮಾಲಕ ವಿರೋಧಪಕ್ಷಗಳಾದ ಜನತಾಪಕ್ಷ, ಲೋಕದಳ, ಮತ್ತಿತರ ಪಕ್ಷಗಳೂ ದೇಶದಲ್ಲಿ ಏನೇ ನಡೆಯಲಿ ಇದೆಲ್ಲಾ ಕಾಂಗ್ರೆಸ್ಸ (ಐ)ಯು ಜನತೆಯ ದೃಷ್ಟಿಯನ್ನು ಬೇರೇಡೆಗೆ ಒಯ್ಯುಲು ಮಾಡುತ್ತಿರುವ ಪಿತೂರಿಯಿಂದ ದೂರಿ ಛಿದ್ರಕಾರಿ ಶಕ್ತಿಗಳನ್ನು ವಿರೋಧಿಸುವುದಕ್ಕೂ ಈ ಛಿದ್ರಕಾರಿ ಶಕ್ತಿಗಳ ಹಿಂಬದಿಯಲ್ಲಿರುವ ಸಾಮ್ರಾಜ್ಯಶಾಹಿಗಳ ಕೈಗಳನ್ನು ನೋಡುವುದಕ್ಕೂ, ನಿರಾಕರಿಸುತ್ತಿದ್ದಾರೆ. ಪಂಜಾಬಿನಲ್ಲಿ ಇಂದು ನಡೆಯುತ್ತಿರುವ ವಿಧ್ವಂಸಕಾರಿ ಚಟುವಟಿಕೆಗಳನ್ನು ಖಂಡತುಂಡವಾಗಿ ಖಂಡಿಸುತ್ತಿಲ್ಲ. ಜಾತೀಯ ರಾಜಕೀಯ ಮತ್ತು ಮತೀಯ ರಾಜಕೀಯವೇ ಅವರ ರಾಜಕೀಯವೂ ಆಗಿದೆ. ಅವರೇ ಹಲವೆಡೆಗಳಲ್ಲಿ ಉದ್ದಿಶ್ಯಪೂರ್ವಕವಾಗಿ ಭಾಷೆಯ ಹೆಸರಿನಲ್ಲಿ ಚಳವಳಿಗಳನ್ನು ಮಾಡುತ್ತಿದ್ದಾರೆ.

ಇಂತಹ ವೇಳೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯಾವ ಹೆಸರಿನಲ್ಲಾಗಲಿ, ಯಾವುದೇ ರೂಪದಲ್ಲೇ ಆಗಲಿ, ದೇಶದ ಸಮಗ್ರತೆಗೆ ಗಂಡಾಂತರಕಾರಿಯಾದ ಎಲ್ಲಾ ಜಾತೀಯ–ಮತೀಯ–ಪ್ರತ್ಯೇಕತಾ ಶಕ್ತಿಗಳ ಈ ಕೃತ್ಯಗಳನ್ನು ಖಂಡಿಸುತ್ತಾ ಬಂದಿದೆ. ತನ್ನ ಎಲ್ಲಾ ಶಕ್ತಿಗಳನ್ನು ಉಪಯೋಗಿಸಿ ಅವರನ್ನು ಜನತೆಯಿಂದ ದೂರಮಾಡಲು ಹೋರಾಟ ನಡೆಸುತ್ತಿವೆ. ಈ ಶಕ್ತಿಗಳನ್ನು ರಾಜಕೀಯವಾಗಿ ಜನತೆಯಿಂದ ಪ್ರತ್ಯೇಕಗೊಳಿಸದೆ ವಿನಹ ನಾಶಗೊಳಿಸುವುದು ಅಸಾಧ್ಯವೆಂಬುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮಾತ್ರ ತಿಳಿದಂತಿದೆ.

ಸ್ಟಾಲಿನ್ ಹೇಳಿದಹಾಗೆ "ಎರಡನೆ ಮಹಾ ಯುದ್ಧದನಂತರ ಸಾಮ್ರಾಜ್ಯಶಾಹಿಶಕ್ತಿಗಳ ಬಲೆಗೆ ಬಿದ್ದು ಬಂಡವಾಳಶಾಹಿ ಶಕ್ತಿಗಳು ದೇಶಗಳ ಸಾರ್ವಭೌಮತ್ವ, ಸ್ವಾತಂತ್ರ ಮತ್ತು ಪ್ರಜಾಪ್ರಭುತ್ವ ಮತ್ತು ಸಮಗ್ರತೆಗಳನ್ನು ಕಾಪಾಡುವುದಲ್ಲಿ ಹಿಂದೇಟು ಹೊಡೆಯುತ್ತಾ ಬರುತ್ತಾರೆ; ಅಭಾರ ಹೆಚ್ಚೆಚ್ಚಾಗಿ ಕಾರ್ಮಿಕ ವರ್ಗದ ಮೇಲೆ ಮತ್ತು ಅದರ ರಾಜಕೀಯ ಪಕ್ಷವಾದ ಕಮ್ಯುನಿಸ್ಟ್ ಪಕ್ಷದ ಮೇಲೆ ಬೀಳುತ್ತಿದೆ" ಎಂಬುದು ಭಾರತದ ವಿಷಯದಲ್ಲೂ ಸಮಂಜಸವಾಗುತ್ತಿದೆ.

ಕೇಂದ್ರ ಸಮಿತಿಯ ಹೇಳಿಕೆಯನ್ನು ಇಲ್ಲಿ ಉಲ್ಲೇಖಿಸುವುದು ಸಮಂಜಸವಾಗುವುದು: ಈ ದಿನ ಐಕ್ಯತೆ ಮತ್ತು ಸಮಗ್ರತೆಗೆ ಬಂದ ಅಪಾಯ ತೀವ್ರವಾಗಿದೆ, ಸಾಮ್ರಾಜ್ಯಶಾಹಿಗಳ ಕೈ ಎಲ್ಲೆಡೆ ತೋರುತ್ತಿದೆ. ಕಳೆದ ಐದು ವರ್ಷಗಳಲ್ಲಿ ರಾಷ್ಟ್ರೀಯ ಐಕ್ಯತೆಗೆ ಛಿದ್ರಕಾರಿಶಕ್ತಿಗಳಿಂದ ಅಪಾಯ ಹಲವು ಪಟ್ಟು ಅಧಿಕಗೊಂಡಿದೆ. ದೇಶದ ಶಿಥಿಲತೆಗೆ ಹವಣಿಸುವ ಈ ದುಷ್ಟಶಕ್ತಿಗಳನ್ನು ಹೋರಾಡದೆ ವಿನಹ ಪ್ರಜಾಸತ್ತಾತ್ಮಕ ಚಳವಳಿಯನ್ನು ಮುನ್ನಡೆಸುವುದು ಅಸಾಧ್ಯ. ನಮ್ಮ ಪಕ್ಷವು ಪ್ರತ್ಯೇಕವಾದಿ, ಮತೀಯ ಮತ್ತು ಛಿದ್ರಕಾರಿ ಶಕ್ತಿಗಳನ್ನು ಹೋರಾಡುವುದರಲ್ಲಿ ಒಂದು ಪ್ರಮುಖ ಪಾತ್ರ ವಹಿಸುತ್ತಾ ಬಂದಿದೆ. ಅಸ್ಸಾಂನಲ್ಲಿ ಪ್ರತ್ಯೇಕವಾದಿಗಳನ್ನು ಹೋರಾಡುತ್ತಾ ನಮ್ಮ ಹಲವು ಸಂಗಾತಿಗಳು ಬಲಿಯಾದರು. ಪಂಜಾಬಿನಲ್ಲಿ ನಮ್ಮ ಸಂಗಾತಿಗಳು ವೀರಾವೇಶದಿಂದ ಸಿಖ್ ಪ್ರತ್ಯೇಕವಾದಿಗಳ ಮತ್ತು ಉಗ್ರವಾದಿಗಳ ವಿರುದ್ಧ ಹೋರಾಡಿ ಪಂಜಾಬಿನ ಐಕ್ಯತೆಯನ್ನು ಎತ್ತಿ ಹಿಡಿಯುತ್ತಿದ್ದಾರೆ. ನಾವು ಸರಿಯಾದ ಮತ್ತು ವಾಸ್ತವಿಕವಾದ ನಿಲುವನ್ನು ಪ್ರಜಾಸತ್ತಾತ್ಮಕ ತತ್ವಗಳ ಆಧಾರವಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವುದಕ್ಕಾಗಿ ಕೈಗೊಂಡಿದ್ದೇವೆ. ಆದರೆ ಕೇಂದ್ರ ಸರಕಾರದಧೋರಣೆಯು ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸುತ್ತಿದೆ ಆದ ಕಾರಣ ವಿಛಿದ್ರಕಾರಿ ಶತೃಗಳ ವಿರುದ್ಧ ಹೋರಾಟ ಮತ್ತು ದುಡಿಯುವ ಜನತೆಯ ಐಕ್ಯತೆಗಾಗಿ ಹೋರಾಟ-ಇವು ಕಾಂಗ್ರೆಸ್ಸ (ಐ) ಮಾತ್ರ ಬಂಡವಾಳಶಾಹಿ–ಭೂಮಾಲಕ ವರ್ಗಗಳ ವಿರೋಧ ಪಕ್ಷಗಳ ಸಂದರ್ಭವಾದಿ ಧೋರಣೆಗಳ ವಿರುದ್ಧ ಹೋರಾಟದೊಂದಿಗೆ ಹೆಣೆದುಕೊಂಡಿದೆ.

"ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಸಾವಿರಾರು ಮಂದಿ ತಮ್ಮ ಪ್ರಾಣ ತೆತ್ತ ವೀರ ಪರಂಪರೆ ನಮಗಿದೆ. ಹಿಂದೂಗಳು, ಮುಸ್ಲಿಮರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಒಟ್ಟಾಗಿ ವಿದೇಶಿ ಆಡಳಿತೆಯನ್ನು ಎದುರಿಸಿ ತಮ್ಮ ರಕ್ತಸುರಿಸಿದಜಾಲಿಯನ್‌ವಾಲ್ ಬಾಗಿನ ಉತ್ತರಾಧಿಕಾರಿಗಳು ನಾವು ಬೊಂಬಾಯಿ, ಕಾನ್‌ಪುರ, ಕಲ್ಕತ್ತಾ, ಮದ್ರಾಸು ಮತ್ತಿತರ ಸ್ಥಳಗಳ ಕಾರ್ಮಿವರ್ಗವು ತನ್ನ ದಿನನಿತ್ಯಾ ಪ್ರಶ್ನೆಗಳಿಗಾಗಿ ಹೋರಾಡುವ ವೇಳೆಯಲ್ಲಿಯೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ ವಹಿಸಿದ ವೀರ ಪರಂಪರೆವುಳ್ಳವರು ನಾವು.

"ನಮ್ಮ ಹಿರಿಯರು ಸಾಮ್ರಾಜ್ಯಶಾಹಿಗಳ ಎಲ್ಲಾ ಪಿತೂರಿಗಳನ್ನು ಸೋಲಿಸುವುದರಲ್ಲಿ ಯಶಸ್ವಿಯಾಗಿದ್ದರೆ, ಜಾತೀಯ ಮತೀಯ ವಿಛಿದ್ರಕಾರಿ ಶಕ್ತಿಗಳನ್ನು ಎದುರಿಸಿ ರಾಷ್ಟ್ರೀಯತೆ ಐಕ್ಯತೆಯನ್ನು ಬಲಪಡಿಸಿದ್ದರೆ, ನಮಗೆ ಯಾಕೆ ಸಾಧ್ಯವಿಲ್ಲ?

ದೇಶಪ್ರೇಮಿ ಪ್ರಜಾಪ್ರಭುತ್ವ ಶಕ್ತಿಗಳನ್ನು ಹೊಡೆಪೋಡಿಸೋಣ.... ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಯನ್ನು ಪುನರುಜ್ಜೀವನಗೊಳಿಸೋಣ.

ಕರ್ನಾಟಕದಲ್ಲಿ ಯಶಸ್ವೀ ಐಕ್ಯತಾ ವಾರಾಚರಣೆಯಾಗುತ್ತದೆ ಎಂಬುದರಲ್ಲಿ ನಮಗೆ ಸಂಶಯವಿಲ್ಲ.

## "ಶಾಂತಿ ನೆಲೆಗೊಂಡರೆ ಸಾಮ್ರಾಜ್ಯಶಾಹಿ ಪತನ"

ದಿನಾಂಕ–6–8–86 ರಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಗಳ ಒಕ್ಕೂಟದ ಕರೆಯಂತೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್‌ಯೂನಿಯನ್ ನೇತೃತ್ವದಲ್ಲಿ ಹಿರೋಷಿಮಾ ದಿನಾಚರಣೆಯ ಅಂಗವಾಗಿ ಏರ್ಪಟ್ಟಿದ್ದ ರ‍್ಯಾಲಿ ನಗರದ ಚಿಕ್ಕಲಾಲ್‌ಬಾಗ್‌ನಿಂದ ಹೊರಟು ನೆಹರು ಪಾರ್ಕು ತಲುಪಿತು. ಯುದ್ಧ ವಿರೋಧಿ ಘೋಷಣೆಗಳು ರಸ್ತೆಯುದ್ದಕ್ಕೂ ಮೊಳಗಿದವು. ಬಹಿರಂಗಸಭೆಯ ಸ್ವಾಗತ ಭಾಷಣವನ್ನು ಸಿ.ಐ.ಟಿ.ಯು. ನಾಯಕರಾದ ಕಾ|| ಆರ್. ಶ್ರೀನಿವಾಸ್‌ರವರು ಮಾಡಿದರು ಕಾ. ಟಿ.ಎಸ್. ಅನಂತರಾವ್ ಅಧ್ಯಕ್ಷತೆ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಕಾ. ಎಸ್. ಸೂರ್ಯನಾರಾಯಣ ರಾವ್‌ರವರು ಅಮೇರಿಕನ್ ಸಾಮ್ರಾಜ್ಯಶಾಹಿ ರೀಗನ್ ಸರ್ಕಾರವನ್ನು ತನ್ನ ಆರ್ಥಿಕ ಬಿಕ್ಕಟ್ಟು, ಮಾರುಕಟ್ಟೆಯ ಕುಸಿತ, ಕೈಗಾರಿಕೆ ಮುಗ್ಗಟ್ಟುಗಳಿಂದ ಪಾರಾಗಲು ಕ್ರೂಯಿಸ್, ನ್ಯೂಕ್ಲಿಯರ್, ಅಣುಬಾಂಬ್, ತಯಾರಿಸಿ ತಾರಾಸಮರವನ್ನು ನಡೆಸುವ ತಯಾರಿಯಲ್ಲಿದೆ. ಎಂದು ಎಚ್ಚರಿಸಿದರು.

## ಕಾರ್ಮಿಕರ ಪಣ

(ಒಂದನೇ ಪುಟದಿಂದ)

ಕೇಂದ್ರ ಸಂಘಟನೆಗಳ ಭಾಷಣಗಾರರಿಂದ ಭಾರತದ ಕಾರ್ಮಿಕವರ್ಗ ಮಾರ್ಗದರ್ಶನದ ಕೆಲಸವನ್ನು ಕೈಗೆತ್ತಿಕೊಂಡಿದ್ದೆ, ರಾಷ್ಟ್ರೀಯ ಆಂದೋಲನ ಸಮಿತಿಗಿಂತ ಹೆಚ್ಚಿನ ಮಟ್ಟದ ಐಕ್ಯತೆ ಇಲ್ಲಿ ಕಂಡುಬರುತ್ತದೆ, ಕಾರ್ಮಿಕವರ್ಗ ಮಧ್ಯಪ್ರವೇಶಿಸಿ ನೇತೃತ್ವ ನೀಡಬೇಕು, ಇದೊಂದು ಅಪೂರ್ವ ಸಂದರ್ಭ, ಸುವರ್ಣಾಕ್ಷರದಲ್ಲಿ ಬರೆಯಬೇಕಾದ ದಿನ, ಇತ್ಯಾದಿ ಉದ್ಗಾರಗಳು ಈ ಸಮಾವೇಶದಲ್ಲಿ ಕೇಳಿಬಂದವು.

ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಕಾ. ಸೂರ್ಯನಾರಾಯಣರಾವ್ ಮಾತನಾಡುತ್ತಾ, "ದೇಶದ ಐಕ್ಯತೆ ಸಮಗ್ರತೆ ಇಲ್ಲದಿದ್ದರೆ ಕಾರ್ಮಿಕರ ಹಕ್ಕುಗಳಿಲ್ಲ, ಪ್ರಜಾಪ್ರಭುತ್ವ ಇಲ್ಲ, ಹೊರಗಿನಿಂದ ಸಾಮ್ರಾಜ್ಯಶಾಹಿಗಳ ಪಿತೂರಿ ಒಳಗಿನಿಂದ ಕೋಮುವಾದಿಗಳ ಪ್ರಯತ್ನ ಇವನ್ನು ಕಾರ್ಮಿಕರು ಮರೆಯಬಾರದು" ಎಂದು ಹೇಳಿದರು. ಭಾಷಾವಾರು ಪ್ರಾಂತ್ಯಗಳ ರಚನೆಯಿಂದಾಗಿ ಪ್ರತ್ಯೇಕವಾದ ಬೆಳೆಯಿತೆಂಬ ಅಭಿಪ್ರಾಯವನ್ನು ಅಲ್ಲಗಳೆಯುತ್ತಾ ಮಾತೃಭಾಷೆಯಲ್ಲಿ ಶಿಕ್ಷಣ, ಸ್ಥಳೀಯ ಭಾಷೆಗಳಲ್ಲಿ ಆಡಳಿತ ಸ್ವಾತಂತ್ರ್ಯ ಹೋರಾಟದ ಅಧಾರವಾಗಿತ್ತು ಎಂಬುದರತ್ತ ಸಭಿಕರ ಗಮನ ಸೆಳೆದರು. ಭಾರತ ಸರಕಾರ ಸಮಸ್ಯೆ ಪರಿಹರಿಸುವುದರಲ್ಲಿ ತೋರುವ ಚಂಚಲತೆಯ ಬಗ್ಗೆ ಹೇಳುತ್ತಾ ಕೆಲಸದ ಹಕ್ಕು ಮೂಲಭೂತ ಹಕ್ಕಾಗಿದ್ದರೆ 'ಮಣ್ಣಿನ ಮಕ್ಕಳು' ಇತ್ಯಾದಿ ಪ್ರತ್ಯೇಕ ಭಾವನೆಗಳಿಗೆ ಎಡೆಯಿರುತ್ತಿರಲಿಲ್ಲ ಎಂದ ಕಾಂ ಸೂರಿ ತಮ್ಮ ಆರ್ಥಿಕ ಹೋರಾಟಗಳ ಐಕ್ಯತೆಯ ಅನುಭವನ್ನು ದೇಶದ ಐಕ್ಯತೆ, ಸಮಗ್ರತೆ, ಕೋಮು ಸೌಹಾರ್ದತೆ ಕಾಪಾಡುವಲ್ಲಿ ಕಾರ್ಮಿಕರು ಉಪಯೋಗಿಸಿಕೊಳ್ಳಬೇಕೆಂದು ಕರೆ ನೀಡಿದರು.

## ಸಮಾವೇಶದ ಬೇಡಿಕೆಗಳು

ಎ ಐ ಟಿ ಯು ಸಿ ಪರವಾಗಿ ಬಾಬು ಮ್ಯಾಥ್ಯು, ಸಿ ಪಿ ಐ ಮುಖಂಡರಾದ ಎಂ ಎಸ್ ಕೃಷ್ಣನ್, ಎಂ ಸಿ ನರಸಿಂಹನ್, ಹೆಚ್ ಯಂ ಯಸ್. ನ ರಾಂದೇವ್, ಬಿ ಯಂ ಯಸ್ ನ ಶ್ವೇತಾದ್ರಿ, ಐ ಯನ್ ಟಿ ಯು ಸಿ ನ ಅದ್ಯಂತಾಯ, ಬ್ಯಾಂಕು ನೌಕರರ ಪರವಾಗಿ ರೇವಣ್ಣ ಹಾಗೂ ರೈ, ವಿಮಾ ನೌಕರರ ಪರವಾಗಿ ಶ್ರೀನಿವಾಸನ್ ಮತ್ತು ಕೃಷ್ಣಸಾಮಿ, ಕೇಂದ್ರ ಸರಕಾರಿ ನೌಕರರ ಪರವಾಗಿ ಆನಂದ್, ರಾಜ್ಯ ಸರಕಾರೀ ನೌಕರರ ಪರವಾಗಿ ಕೇಶವಮೂರ್ತಿ ಹಾಗು ಹೆಚ್ ಎ ಎಲ್ ಕಾರ್ಮಿಕ ಸಂಘದ ಮಹದೇವನ್ ಪುರಭವನದಲ್ಲಿ ನೆರೆದಿದ್ದ ಕಾರ್ಮಿಕರನ್ನೂ ಉದ್ದೇಶಿಸಿ ಮಾತನಾಡಿದ ಇತರ ಮುಖಂಡರು.

ರಾಷ್ಟ್ರೀಯ ಸಮಗ್ರತಾ ಮಂಡಳಿಗಳನ್ನು ರಾಜ್ಯಮಟ್ಟದಲ್ಲೂ ರಚಿಸಬೇಕು ಎಂಬ ಬೇಡಿಕೆಗಳನ್ನು ಸಮಾವೇಶ ಮಂಡಿಸಿತು. ಅಕ್ಟೋಬರ್ 2 ರಂದು ಬೆಂಗಳೂರು ನಗರದಲ್ಲಿ ಜಾತೀಯತೆ ಹಾಗೂ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಕಾರ್ಮಿಕರ ಬೃಹತ್ ಸಭೆಯನ್ನು ನಡೆಸಲು ಕೂಡಾ ಸಮಾವೇಶ ನಿರ್ಧರಿಸಿತು.

ಸಿ.ಐ.ಟಿ.ಯು.ನ ರಾಜ್ಯ ಸಮಿತಿಯ ಸದಸ್ಯ ಕಾಂ. ಆರ್. ಶ್ರೀನಿವಾಸ್ ಹಾಗೂ ಇತರ ನಾಲ್ಕು ಕೇಂದ್ರೀಯ ಸಂಘಟನೆಗಳ ಮುಖಂಡರಿಂದ್ದ ಅಧ್ಯಕ್ಷ ಮಂಡಳಿ ಸಮಾವೇಶವನ್ನು ನಡೆಸಿಕೊಟ್ಟಿತು.

Printed & Published by P. Ramachandra Rao on behalf of the Communist Party of India [Marxist] Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone: 75331 Editor P. Ramachandra Rao Managing Editor: N. K. Upadhyaya